
₹ 5/-

# ನೇಸರು

## ತಿಂಗಳೋಲೆ

PAGES 20

FEBRUARY 2024 | Nesaru Tingalole | Vol. XLII - 02



**ಮತ್ತೆ ಬಂದಾನೆ ಮತ್ತು ಮುಂದೆ ನಿಂದಾನೆ**


ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

## ಅಸೋಸಿಯೇಷನ್ನಿನಲ್ಲಿ ಮುಂಬರುವ ಕಾರ್ಯಕ್ರಮ



**ಮಂಗಳವಾರ, 13.02.2024 ಸಂಜೆ 5.30**

**ಮಾಘಿ ಗಣಪತಿ ಪೂಜೆ, ಭಜನೆ**

**ಹಾಗೂ**

**ಪ್ರಸಾದ ವಿನಿಯೋಗ**

## ಶ್ರೀರಂಗ ರಂಗೋತ್ಸವ

**ಶನಿವಾರ, 17.02.2024 ಸಂಜೆ 6.30**

**ಕೊಂಕಣಿ ನಾಟಕ : 'ಲಗ್ನಾ ಪಿಶ್ಯೆ'**

ಲೇಖಕರು : ಬಾಲಕೃಷ್ಣ ಪುರಾಣಿಕ್,

ನಿರ್ದೇಶಕ : ಲಿಮ್ಕಾ ಖ್ಯಾತಿಯ ಡಾ. ಚಂದ್ರಶೇಖರ್ ಶೆಣೈ

ವಿಶೇಷ ಮಾರ್ಗದರ್ಶನ: ವಿಶ್ವ ಕೊಂಕಣಿ ಪ್ರಶಸ್ತಿ ಪುರಸ್ಕೃತ ಎ. ಜಿ. ಕಾಮತ್

ಸಹ ನಿರ್ದೇಶಕ : ತೋನ್ಸೆ ವೆಂಕಟೇಶ್ ಶೆಣೈ

**ರವಿವಾರ 18.02.2024 ಸಂಜೆ 6.30**

**ಕನ್ನಡ ನಾಟಕ 'ಹಗ್ಗದ ಕೊನೆ'**

**ಹೊಂಗಿರಣ ತಂಡ ಶಿವಮೊಗ್ಗ ಇವರಿಂದ**

**ರಚನೆ : ಪರ್ವತವಾಣಿ ವಿನ್ಯಾಸ ನಿರ್ದೇಶನ : ಡಾ. ಸತೀಶ್ ಸಾಸ್ವೇಹಳ್ಳಿ**

**ಸೋಮವಾರ 19.02.2024 ಸಂಜೆ 6.30**

**ಕನ್ನಡ ನಾಟಕ : 'ಸ್ವಾತಂತ್ರ್ಯ ಸಮರ ಕರುನಾಡು ಅಮರ'**

**ರಂಗ ವಿಜಯ ತಂಡ ಮಾಲೂರು**

**ರಚನೆ ಮತ್ತು ಸಂಗೀತ : ಡಾ. ಟಿ. ಲಕ್ಷ್ಮೀನಾರಾಯಣ್**

**ಶನಿವಾರ 02.03.2024 ಸಂಜೆ 6.00ರಿಂದ**

**ಮೈಸೂರು ಅಸೋಸಿಯೇಷನ್ – ಸಂಸ್ಥಾಪನಾ ದಿನಾಚರಣೆ**

ಹಾಡು, ಕುಣಿತ, ಹಾಸ್ಯ, ಹರಟೆ

ಕಾರ್ಯಕ್ರಮ ನೀಡುವ ಸದಸ್ಯರು ದಯವಿಟ್ಟು ತಮ್ಮ ಹೆಸರನ್ನು ಫೆಬ್ರವರಿ 26ರ ಮುನ್ನ ಕೊಡಬೇಕು

ಎಲ್ಲ ಸದಸ್ಯರಿಗೂ ಅಂದು ಬರಲೇಬೇಕೆಂದು ಒತ್ತಾಯ

ಪ್ರೀತಿ ಭೋಜನದೊಂದಿಗೆ ಮುಕ್ತಾಯ



**ಶುಕ್ರವಾರ, 08.03.2024 ಸಂಜೆ 5.30**

**ಮಹಾಶಿವರಾತ್ರಿ ಪೂಜೆ ಮತ್ತು ಭಜನೆ**

ಪ್ರಸಾದ ವಿನಿಯೋಗ

ನೇಸರು ತಿಂಗಳೋಲೆ

ಸಂಪುಟ - 42 ಫೆಬ್ರವರಿ- 2024 ಸಂಚಿಕೆ-2

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ಇತಿಹಾಸ ಮರುಕಳಿಸಿತು



**✍ ಡಾ. ಜ್ಯೋತಿ ಸತೀಶ್**

"ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುದ್ದಾನಮ ಧರ್ಮಸ್ಯ ತದಾತ್ಮನಾಮ್ ಸೃಜಾಮ್ಯಹಮ್
ಪರಿತ್ರಾಣಾಯ ಸಾಧುನಾ ವಿನಾಶಾಯ ಚ ದುಷ್ಕೃತಮ್
ಧರ್ಮಸಂಸ್ಥಾಪನಾಯಾರ್ಥ ಸಂಭವಾಮಿ ಯುಗೇ ಯುಗೇ"

ಇದು ಶ್ರೀಕೃಷ್ಣ ಅರ್ಜುನನಿಗೆ ಗೀತೋಪದೇಶ ಮಾಡುವಾಗ ಹೇಳಿದ ಉವಾಚ. ಈ ಭೂಮಿಯಲ್ಲಿ ಯಾವಾಗ ಅನ್ಯಾಯ, ಅಧರ್ಮಗಳು ಮೇರೆ ಮೀರಿ ಹಿಂಸಾವೃತ್ತಿಯು ಹೆಚ್ಚು ತಾಂಡವಾಡಿದಾಗ, ನಾನು ಧರ್ಮರಕ್ಷಣೆಗಾಗಿ, ಭಕ್ತರ ಉಳಿವಿಗೆ ಮತ್ತೆ ಅವತಾರ ಎತ್ತಿ ಬರುತ್ತೇನೆಂದು ಅಭಯ ನೀಡಿದ್ದಾನೆ.

ಇನ್ನು ಈಗ ಕಲಿಯುಗಕ್ಕೆ ಶ್ರೀ ರಾಮ ಬಂದಿದ್ದಾನೆ. ನಮ್ಮೆಲ್ಲರ ಕಷ್ಟ, ದುಃಖಕ್ಕೆ ಈಗಲಾದರೂ ಸ್ಪಂದಿಸಲಿದ್ದಾನೆ, ಎಂದು ನಾಡಿನ ಜನತೆ ಬಹಳ ಸಂಭ್ರಮದಿಂದ, ಉತ್ಸಾಹದಿಂದ ಶ್ರೀರಾಮ ಪ್ರಭುವನ್ನು ಅಯೋಧ್ಯೆಗೆ ಬರಮಾಡಿಕೊಂಡಿದ್ದಾರೆ. ಜನವರಿ 22ರಂದು ನಮ್ಮ ಹಿಂದೂಗಳಿಗೆ ದೀಪಾವಳಿ ಹಬ್ಬದ ಸಂಭ್ರಮ. ನಾಡಿನೆಲ್ಲಡೆ ದೀಪಗಳನ್ನು ಹಚ್ಚಿಸಿ ಶ್ರೀರಾಮನ ಆಗಮನವನ್ನು ಮೆಚ್ಚಿ ಸಂಭ್ರಮದಿಂದ ಆಚರಿಸಿದ್ದಾರೆ. ಅಯೋಧ್ಯೆಯಲ್ಲಿ ಪ್ರಾಣಪ್ರತಿಷ್ಟಾದ ಜೊತೆಗೆ ಎಲ್ಲರ ಹೃದಯದಲ್ಲೂ ಭಕ್ತಿಯಿಂದ ಕೂಡಿದ ಸಮರ್ಪಣಾ ಭಾವ. ನಾಡಿನ ಎಲ್ಲಾ ಮಂದಿರಗಳಲ್ಲೂ ಈ ಸಂಭ್ರಮವನ್ನು ವಿಜೃಂಬಣೆಯಿಂದ ಆಚರಿಸಲಾಯಿತು. ಎಲ್ಲೆಡೆ ಮರ್ಯಾದ ಪುರೊಷೋತ್ತಮನ ಸ್ತುತಿ, ಭಜನೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಎಲ್ಲರೂ ಮನೆಯಲ್ಲೇ ಕುಳಿತು ಭಗವಾನ್ ಶ್ರೀರಾಮನ ಪ್ರಾಣ ಪ್ರತಿಷ್ಠಾದ ಕಾರ್ಯಕ್ರಮವನ್ನು ದೂರದರ್ಶನದ ಮೂಲಕ ಕಣ್ತುಂಬಿಕೊಂಡರು. ಅಂದು ಶ್ರೀರಾಮ 14ವರ್ಷ ವನವಾಸವನ್ನು ಪೂರೈಸಿ ಮತ್ತೆ ಅಯೋಧ್ಯೆಗೆ ಮರಳಿ ಬಂದಾಗ ಅಯೋಧ್ಯಾ ವಾಸಿಗಳು ಹೇಗೆ ಸಂಭ್ರಮದಿಂದ ಬರಮಾಡಿಕೊಂಡಿದ್ದರೋ, ಅದೇ ರೀತಿ ಇಂದು ಅಜ್ಞಾತವಾಸದಲ್ಲಿದ್ದ ನಮ್ಮ ಪ್ರಭು ಶ್ರೀರಾಮ ಈಗ ನಮ್ಮ ಮುಂದೆ ಬಂದಿದ್ದಾನೆ. ಹೀಗಾಗಿ ಅಯೋಧ್ಯಯ ವೈಭವ ಮತ್ತೆ ಮರಳಿ ಬಂದಿದೆ. ಕಾಲಗರ್ಭದಲ್ಲಿ ಅಡಗಿಹೋಗಿದ್ದ ನಮ್ಮೆಲ್ಲರ ಕನಸು ನನಸಾಯಿತು. 'History Repeat' ಎನ್ನುದನ್ನು ಕಂಡುಕೊಂಡೆವು. ನಮ್ಮ ನಂಬಿಕೆ, ವಿಶ್ವಾಸಕ್ಕೆ ಸಿಕ್ಕ ಪ್ರತಿಫಲ ಇದು. ರಾಮ ನಮ್ಮೆಲ್ಲರ ಶಕ್ತಿ. ಅವನಲ್ಲಿರುವ ಭಕ್ತಿ, ನಮ್ಮೆಲ್ಲರನ್ನು ವಿಚಾರವಂತರನ್ನಾಗಿ ಮಾಡುತ್ತದೆ. ಈಗ ನಮ್ಮೆಲ್ಲರ ಜವಾಬ್ದಾರಿ ಹೆಚ್ಚಿದೆ. ಶ್ರೀರಾಮನ ಕೃಪೆಗೆ ಪಾತ್ರರಾಗಬೇಕಾದರೆ, ಅವನು ನಡೆದ ದಾರಿಯಲ್ಲಿ ನಾವು ನಡೆಯುವುದು. ಮರ್ಯಾದ ಪುರುಷೋತ್ತಮನ ಆಚಾರ ವಿಚಾರಗಳನ್ನು ಮುನ್ನೆಲೆಗೆ ತಂದು, ಅದನ್ನು ಎಲ್ಲರ ಮನಸ್ಸುಗಳಲ್ಲಿ ಪ್ರತಿಷ್ಠಾಪಿಸುವುದು.

ಶ್ರೀರಾಮ ಸ್ವಾರ್ಥಕ್ಕಿಂತ ತನ್ನ ಪ್ರಜೆಗಳ ಸುಖ ಮುಖ್ಯ ಎಂದು ಸಾರಿದನು. ಪ್ರಜೆಗಳ ನೆಮ್ಮದಿಯೇ ತನ್ನ ನಿಜವಾದ ಬದುಕು ಅಂದುಕೊಂಡಿದ್ದ ಆತ ಇವತ್ತಿಗೂ ನಮಗೆಲ್ಲರಿಗೂ ಮಾದರಿ. ಹಾಗಾಗಿ ಅವನು ಯಾವತ್ತಿಗೂ ಆದರ್ಶಪುರುಷ. ರಾಮನಾಮ ಪಠನ ಮಾಡಿದಾಗ, ನಮ್ಮ ಮನಸ್ಸಲ್ಲಿ ಅದೇನೋ ವಿನಮ್ರ ಭಾವ. ನಮಗೇ ಗೊತ್ತಿಲ್ಲದ ಹಾಗೆ ನಮ್ಮಲ್ಲಿ ಸಮರ್ಪಣಾ ಭಾವ ಮೂಡುತ್ತದೆ. ಒಂದು ರೀತಿಯಲ್ಲಿ ಮೈಯೆಲ್ಲ ರೋಮಾಂಚನವಾಗಿಸುವ ಭಾವ ಉದ್ಭವವಾಗುತ್ತದೆ. ಮನಸ್ಸು ಪ್ರಶಾಂತವಾಗುತ್ತದೆ. ಆ ಎರಡು ಅಕ್ಷರಗಳಲ್ಲಿ ಅದೇನೋ ಮೋಡಿ ಮಾಡಿಸುವ ಶಕ್ತಿ ಇದೆಯೋ ಗೊತ್ತಿಲ್ಲ. ನಾವು ಚಿಕ್ಕವರಿರುವಾಗ ಜೋರಾಗಿ ಮಳೆ, ಗಾಳಿ ಬಂದಾಗ, ನಮ್ಮ ಅಜ್ಜಿಯ ಕಾಲದಿಂದಲೂ ನಾವು ಕೇಳಿಬರುತ್ತಿದ್ದ ಪಠನ ಎಂದರೆ ಅದು ರಾಮನಾಮ. ಮನಸ್ಸಲ್ಲಿ ಹುದುಗಿದ್ದ ಭಯ ಎಲ್ಲೋ ಮಾಯವಾಗಿ ಬಿಡುತ್ತದೆ. ಆಗ ನಮಗೆ ರಾಮನಾಮದ ಶಕ್ತಿಯ ಅಷ್ಟೊಂದು ಅರಿವಿರಲಿಲ್ಲ. ಈಗ ಅದರ ಮಹತ್ವ ತಿಳಿಯಿತು. ದೇವರು ಇದ್ದಾನೋ ಇಲ್ಲವೋ ಎನ್ನುವ ಮನಸ್ಸಿನ ಗೊಂದಲಕ್ಕೆ ತೆರೆಬಿದ್ದಿತು.

# ಶಿಲ್ಪಿ ಅರುಣ್ ಯೋಗಿರಾಜ್



ಡಾ. ಮಂಜುನಾಥ್

ರಾಮ ಜನ್ಮಭೂಮಿ ಈ ಶತಮಾನದಲ್ಲಿಯೇ ನಡೆದ ಮಹತ್ವ ಸಂಗತಿಗಳಲ್ಲಿ ಮೊದಲಿನದು. ಬಾಬರ್ ಇಲ್ಲವೇ ಅವನ ದಂಡಾಳುಗಳು ಕೆಡವಿದ ಮಂದಿರದ ಮೇಲೆ ಒಂದು ಮಸೀದಿ ಕಟ್ಟಿದ್ದರು.



ಅಲ್ಲಿ ಯಾರೂ ಮುಸಲ್ಮಾನರು ಪ್ರಾರ್ಥನೆ ಮಾಡಲು ಹೋಗುತ್ತಿರಲಿಲ್ಲ. ಮತ್ತೆ ಭಾರತದ ಸರ್ವೋಚ್ಚ ನ್ಯಾಯಾಲಯ 2019 ರಲ್ಲಿ ನೀಡಿದ ತೀರ್ಪಿನ ಮೇರೆಗೆ ವಿಶ್ವ ಹಿಂದೂ ಪರಿಷತ್ತಿನ ಮುಂದಾಳುತನದಲ್ಲಿ ಅಲ್ಲಿ ಮತ್ತೆ ಶ್ರೀರಾಮನ ಮಂದಿರವನ್ನು ಕಟ್ಟಲು ಮೊದಲು ಮಾಡಿದರು. ಅಲ್ಲಿ ಕೆತ್ತಿದ ಕಂಬಗಳಲ್ಲಿ ಅನೇಕ ಕರ್ನಾಟಕದ ಶಿಲ್ಪಿಗಳು ಕೆಲಸ ಮಾಡಿದರು. ಈಗ ಏಳು ತಿಂಗಳ ಹಿಂದೆ ರಾಮ ಜನ್ಮಭೂಮಿ ನ್ಯಾಸ, ಇತ್ತ ಕರೆಯ ಮೇರೆಗೆ ಭಾರತದ ಅನೇಕ ಕಡೆಯಲ್ಲಿ ಬಾಲ ರಾಮನ ಪ್ರತಿಮೆಯನ್ನು ಕೆತ್ತಲು ಬಹು ಶಿಲ್ಪಿಗಳು ಪಾತ್ರವಾದರು. ಅದರಲ್ಲಿ ಅರುಣ್ ಯೋಗಿರಾಜ್ ಕೂ ಡ ಒಬ್ಬರು.

ಅರುಣ್ ಯೋಗಿರಾಜರದ್ದು ಶಿಲ್ಪಿಗಳದ್ದೇ ಮನೆತನ. ಕಳೆದ ಐದು ತಲೆಮಾರಿನಿಂದ ಇವರ ಕುಟುಂಬ ಶಿಲ್ಪಕಲೆಯನ್ನೇ ಆಧರಿಸಿ ಬಾಳ್ವೆ ಮಾಡಿದವರು.

ಅರುಣ್ ತಂದೆ ಬಸವಣ್ಣ ಯೋಗಿರಾಜ್ ಕರ್ನಾಟಕದ ಅನೇಕ ಕಡೆ ಶಿಲ್ಪಗಳನ್ನು ಕೆತ್ತಿದ್ದಾರೆ. ಅರುಣ್ ಮೊದಲಿಗೆ ಮೈಸೂರಿನಲ್ಲಿಯೇ MBA ಮಾಡಿ ತುಸು ಕಂಪನಿಗಳಲ್ಲಿ ಕೆಲಸ ಮಾಡಿ ಆಮೇಲೆ ಮನೆಯಲ್ಲಿ ತಂದೆಯ ಜೊತೆ ಕೆಲಸ ಮಾಡಿ ಶಿಲ್ಪಿಯಾದರು. ಇವರು ಕೇದಾರನಾಥದಲ್ಲಿ ಆದಿಶಂಕಚಾರ್ಯರ 12 ಅಡಿಗಳ ಪ್ರತಿಮೆಯನ್ನು, ಆಮೇಲೆ ನವದೆಹಲಿಯಲ್ಲಿ India Gate ನಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ, ಬನಶಂಕರಿ ರಾಮಸೀತಾ ಲಕ್ಷ್ಮಣ ಆಂಜನೇಯರ ಪ್ರತಿಮೆಗಳನ್ನು ಕಡೆದು ಅನೇಕ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ಈಗ ರಾಮ ಜನ್ಮಭೂಮಿಯಲ್ಲಿ ಮೂರು ಶಿಲ್ಪಗಳು ಬಂದಿದ್ದು, ಅರುಣ್ ಅವರು ಕೆತ್ತಿರುವ ಬಾಲರಾಮ ಆಯ್ಕೆಯಾಗಿದೆ. ಈ ಬಾಲರಾಮನ ಕಣ್ಣು ಎಲ್ಲರನ್ನೂ ಸೂರೆಗೊಂಡಿದೆ.



ಈ ಪ್ರತಿಮೆಯನ್ನು ಕೆತ್ತಲು ಹೆಗ್ಗಡದೇವನ ಕೋಟೆಯಲ್ಲಿದ್ದ ಭೂಮಿಯಲ್ಲಿ ಅನೇಕ ವರ್ಷಗಳಿಂದಲೂ ಕಾದಿದ್ದ ಕೃಷ್ಣ ಶಿಲೆಯನ್ನು ಆಯ್ಕೆ ಮಾಡಿದರು. ಈ ಕೃಷ್ಣಶಿಲೆ ಯಾವ ಮಳೆಗಾಳಿಗಳಿಗೂ ತಗ್ಗದೆ ಜಗ್ಗದಿರುತ್ತದೆ.

ಕರುನಾಡಿನದೇ ಶಿಲೆ, ಅದನ್ನು ಕರುನಾಡಿನ ಶಿಲ್ಪಿಗಳೇ ಕೆತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ಸಂಗತಿ.

ಕೇವಲ ಹನುಮನೊಬ್ಬನೇ ಕನ್ನಡಿಗ ರಾಮನಿಗೆ ದಾರಿ ತೋರಿದವನು ಎಂದಲ್ಲ. ಇಂದು ನಮ್ಮ ಅರುಣ್ ಯೋಗಿರಾಜ್ ರಾಮನ ಕಣ್ಣನ್ನು ತೆರೆಸಿ ಇಡೀ ನಾಡಿಗೆ ದಾರಿ ತೋರಿದ್ದಾರೆ ಮತ್ತೊಮ್ಮೆ ರಾಮ ರಾಜ್ಯ ಕಣ್ತೆರೆಯಲಿ. ಕಳ್ಳ ಸುಳ್ಳರೆಲ್ಲ ಅಡಗಲಿ.

**ಜೈ ಶ್ರೀ ರಾಮ್**

# ಅಂತರ್ಜಾಲ

(ಉಮಾ ರಾವ್ ಕಥೆಗಳು)

✍ **ಉಮಾ ರಾವ್**



ರಂಗಯ್ಯನವರು ತೀರಿಕೊಂಡ ಸುದ್ದಿ ತಿಳಿದು ತಕ್ಷಣ ನೂರಾರು ಜನ ನೆಂಟರಿಷ್ಟರು ಅವರ ಮನೆಯಲ್ಲಿ ಸೇರಿದರು. ಮನೆಯ ಹೊರಗಡೆ ಕಾರು, ಸ್ಕೂಟರ್ ಗಳ ಸಾಲು ಗೇಟಿನಾಚೆ ಹಾಕಿದ್ದ ಬೆಂಕಿ ಮನೆ ಬಾಗಿಲಲ್ಲಿ ಶೂ, ಚಪ್ಪಲಿಗಳ ರಾಶಿ. ಹಾಲಿನ ನಡು ಮಧ್ಯದಲ್ಲಿ ಮುಖ ಮಾತ್ರ ಬಿಟ್ಟು ಪೂರ್ತಿ ಅಚ್ಚ ಬಿಳಿ ಬಟ್ಟೆಯಲ್ಲಿ ಸುತ್ತಿದ್ದ ಅವರ ದೇಹ. ಸುತ್ತಲು ಆವರಿಸಿದ್ದ ಗಾಢ ಮೌನ. ಬಿಳಿ ಬಟ್ಟೆಯ ಮೇಲೆ ಹಾರಗಳ ರಾಶಿ ಅಲ್ಲೇ ಹಚ್ಚಿಟ್ಟಿದ್ದ ಧೂಪ ಊದುಗಡ್ಡಿಗಳ ವಾಸನೆ. ಅವರ ಹತ್ತಿರ ನೆಲದ ಮೇಲೆ ಕೂತಿದ್ದ ಮಗ ಕೇಶವ, ಸೊಸೆ ಶಾಲಿನಿ, ತಂಗಿ ಲಕ್ಷ್ಮೀ, ಆಕೆಯ ಗಂಡ ಶ್ರೀಕಂಠಯ್ಯ. ಸುತ್ತಲಿದ್ದ ಕುರ್ಚಿ ಸೋಫಾ ಗಳ ತುಂಬಾ ಮಿಕ್ಕ ನೆಂಟರು, ಸ್ನೇಹಿತರು. ವರಾಂಡದಲ್ಲಿ ನಿಂತೇ ಇದ್ದ ಅಷ್ಟು ನೆರೆಹೊರೆಯವರು. ರಂಗಯ್ಯನವರ ತಲೆ ಹತ್ತಿರವೇ ಒಂದು ಚಿಕ್ಕ ಟೀಪಾಯಿ ಮೇಲೆ ಅವರ ಹೆಂಡತಿ ಸಾವಿತ್ರಮ್ಮನ ಫೋಟೋ. ಅದಕ್ಕೂ ಕುಂಕುಮ ಹಾರ.

ಎಲ್ಲರ ತಲೆಯಲ್ಲೂ ನಡೆಯುತ್ತಿದ್ದ ಒಂದೇ ಒಂದು ಪ್ರಶ್ನೆ. ರಂಗಯ್ಯನವರು ಹೀಗೇಕೆ ಮಾಡಿಬಿಟ್ಟರು? ಆತ್ಮಹತ್ಯೆ ಮಾಡಿಕೊಳ್ಳುವಂಥಾದ್ದು ಅವರಿಗೆ ಏನಾಗಿತ್ತು?

75 ವರ್ಷ ವಯಸ್ಸಿನ ಸಂಚೇನಹಳ್ಳಿ ಕೃಷ್ಣಯ್ಯ ರಂಗಯ್ಯನವರು ನಿವೃತ್ತ ಐಎಎಸ್ ಅಧಿಕಾರಿ.

ಪ್ರೈಮರಿ ಸ್ಕೂಲಿನ ಮೇಷ್ಟ್ರ ಮೂರನೇ ಮಗನಾದ ರಂಗಯ್ಯ, ಸ್ವಂತ ಪ್ರತಿಭೆಯಿಂದ ಓದಿ ಬರೆದು ಮುಂದೆ ಬಂದು ನಿಷ್ಠೆಯಿಂದ ಸೇವೆ ಸಲ್ಲಿಸಿ ಒಳ್ಳೆ ಹೆಸರು ತೆಗೆದುಕೊಂಡಿದ್ದವರು. ಬೆಂಗಳೂರಿನ ಪ್ರಖ್ಯಾತ ವೈದ್ಯ ಸುಖತೀರ್ಥರ ಮಗಳು ಸಾವಿತ್ರಿ ಯನ್ನು ಕೈಹಿಡಿದು ಸಂತೃಪ್ತ ಬಾಳನ್ನು ಬಾಳಿದವರು. ಇಬ್ಬರು ಗಂಡು ಮಕ್ಕಳು ಅಚ್ಯುತ, ಕೇಶವ. ಅಚ್ಯುತ ಸ್ಟಾಫ್ಟ್ ವೇರ್ ಇಂಜಿನಿಯರ್ ಆಗಿ ಅಮೇರಿಕಾ ಗೆ ಹೋಗಿ ಅಲ್ಲೇ ಹುಡುಗಿ ನ್ಯಾನ್ಸಿಯನ್ನು ಕೈಹಿಡಿದು ಅಲ್ಲೇ ನೆಲೆಸಿದ್ದ. ಈಗ ಒಂದು ಹೆಣ್ಣು ಮಗುವಿನ ತಂದೆ. ಕೇಶವ ಬ್ಯಾಂಕ್ ಆಫೀಸರ್. ರಂಗಯ್ಯ ಸಾವಿತ್ರಮ್ಮ ಆರಿಸಿದ ಹುಡುಗಿ ಶಾಲಿನಿಯನ್ನು ಮದುವೆಯಾಗಿದ್ದ. ಅವನಿಗೆ ಈಗ 8 ವರ್ಷದ ಮಗನಿದ್ದ.

ಕೇಶವನ ಜೊತೆ ಇರುತ್ತಿದ್ದ ರಂಗಯ್ಯನವರಿಗೆ ಒಂದೇ ಕೊರತೆ ಎಂದರೆ ಐದು ವರ್ಷಗಳ ಹಿಂದೆ ಸಾವಿತ್ರಿ ತೀರಿಕೊಂಡಿದ್ದು. ವರ್ಷಕ್ಕೊಂದು ಸಲ ಅಮೆರಿಕ ಯಾತ್ರೆ, ಅಚ್ಯುತನ ಜೊತೆ ನಾಲ್ಕು ತಿಂಗಳು. ಮಕ್ಕಳು ಸೊಸೆಯರು ಅವರನ್ನು ಅಕ್ಕರೆ ಗೌರವದಿಂದಲೇ ನೋಡಿಕೊಳ್ಳುತ್ತಿದ್ದರು ಇಂಥಾ ರಂಗಯ್ಯನವರು ಈ ಅವಿವೇಕದ ಕೆಲಸ ಏಕೆ ಮಾಡಿಬಿಟ್ಟರು?

"ಐ ಡೋಂಟ್ ಅಂಡರ್ ಸ್ಟ್ಯಾಂಡ್" ದಿನ ಸಂಜೆ ಅವರೊಡನೆ ತಿರುಗಾಟಕ್ಕೆ ಹೋಗುತ್ತಿದ್ದ ಸಂಜೀವ ರಾಯರು ತಲೆ ಚಚ್ಚಿಕೊಂಡರು.

ಏನಾಗಿತ್ತು ಇಂಥ ಕೆಲಸ ಮಾಡೋಕೆ. ನಾನು ಬೆನ್ನಲ್ಲಿ ಬಿದ್ದೋಳಿದೀನಿ ಅನ್ನೋದೆ ಮರೆತು ಬಿಟ್ಟೆಯಟ್ಯಲ್ಲ.. ಅಷ್ಟು ಬೇಜಾರಾಗಿದ್ರೆ ನಮ್ಮ ಜೊತೆ ಒಂದಿಷ್ಟು ದಿನ ಬಂದು ಇರಬಹುದಾಗಿತ್ತಲ್ಲೋ..."ತುರುವೇಕೆರೆಯಿಂದ ಬಂದ ತಂಗಿ ಲಕ್ಷ್ಮಿಯ ಎದೆ ಬಿರಿಯುತ್ತಿತ್ತು.

"ಅಷ್ಟು ವಯಸ್ಸಾದವರ ಮನಸ್ಸಿನಲ್ಲಿ ಏನು ಬರುತ್ತೆ ಅಂತ ಹೇಳುವುದು ಕಷ್ಟ. ಮೇಲೆ ನೋಡೋಕೆ ಎಲ್ಲ ಚೆನ್ನಾಗಿ ಇರ್ತಾರೆ".

"ಪಾಪ ಅಚ್ಯುತ ದೂರ ಇದ್ದರೂ ವಾರಕ್ಕೆರಡು ಫೋನ್ ತಪ್ತಾ ಇರ್ಲಿಲ್ಲ. ಜೊತೆಗೆ ದಿನ ಇ-ಮೇಲ್. ಹೋದ ಸಲ ಬಂದಾಗ ಅವನೇ ಇವರಿಗೆ ಕಂಪ್ಯೂಟರ್ ತಂದು ಕೊಟ್ಟಿದ್ದ. ಸಂಪರ್ಕನೂ ಸುಲಭ, ಜೊತೆಗೆ ಇಂಟರ್ನೆಟ್ ಇದ್ರೆ ಹೊತ್ತು ಹೋಗುತ್ತೆ ಅಂತ."

ಸುತ್ತಲೂ ಸೇರಿದವರು ಮಾತಾಡುತ್ತಿದ್ದರು. ಕೇಶವ ತಲೆತಗ್ಗಿಸಿ ಕೂತಿದ್ದ. ಅವನ ಕಣ್ಣುಗಳು ಕೆಂಪಾಗಿದ್ದವು.

ತಲೆ ಸಿಡಿಯುತ್ತಿತ್ತು.

ಫೋನ್ ರಿಂಗಾಯ್ತು.

ಶ್ರೀಕಂಠಯ್ಯ ಎತ್ತಿಕೊಂಡವರಿಗೆ ಕೇಶವನತ್ತ ತಿರುಗಿ "ನಿಂಗೆ ಕಾಲ್.. ಅಚ್ಯುತಂದು" ಎಂದರು.

ಕೇಶವಾಚಕನ ಮಾತುಗಳಿಗೆ ತಲೆ ಹಾಕಿದ. "ಹೂಂ...ಹೂಂ...ಸರಿ. ಟಿಕೆಟ್ ಸಿಕ್ಕ ತಕ್ಷಣ ಬಾ ಎದುರಿಗೆ ಎಲ್ಲ ಮಾತಾಡೋಣ. ವೆರಿ ಅನ್ ಫಾರ್ಚುನೇಟ್.....ಒಕೆ ವಿ ವಿಲ್ ಪ್ರೊಸೀಡ್."

ತಂದೆಯನ್ನು ಹಿಡಿ ಬೂದಿಯಾಗಿಸಿ ಮನೆಗೆ ಬಂದ ಕೇಶವ ರಾತ್ರಿ 12 ಆದರೂ ಹಾಸಿಗೆಯ ಮೇಲೆ ಹಾಗೆ ಕೂತಿದ್ದ. ಉಟ್ಟ ಪಂಚೆಯಿಂದಲೇ ಉರುಲು ಹಾಕಿಕೊಂಡು ಫ್ಯಾನಿನಿಂದ ನೇತಾಡುತ್ತಿದ್ದ ತಂದೆಯ ದೇಹ ಮತ್ತೆ ಮತ್ತೆ ಎದುರಿಗೆ ಬರುತ್ತಿತ್ತು. ಶಾಲಿನಿ ಸೂರು ದಿಟ್ಟಿಸುತ್ತ ಅಂಗಾತ ಮಲಗಿದ್ದಳು.

"ಶಾಲಿನಿ ನಮ್ಮಿಂದ ಏನಾದರೂ ತಪ್ಪಾಯ್ತಾ"

"ಅಂದ್ರೆ"

"ಜ್ಞಾಪಿಸ್ಕೊ ನಿನ್ನೆ ಏನೇನಾಯ್ತು ಅಂತ"

ಹೇಳಿದ್ನಲ್ಲ, ನಿನ್ನೆನೂ ಸಂಜೆ ರಾಜು ಬಂದ ತಕ್ಷಣ ಅವರೇ ಅವನಿಗೆ ಬಟ್ಟೆ ಬದಲಾಯಿಸಿ, ತಿಂಡಿ ಕೊಟ್ಟರು. ಸಂಜೆ ಎಂದಿನಂತೆ ವಾಕಿಂಗ್ ಹೋಗಿ ಬಂದರು. ರಾತ್ರಿ ಹೊಟ್ಟೆ ತುಂಬ ಊಟ ಮಾಡಿದರು. ನಾನು ಹಾಲು ಕೊಟ್ಟಾಗಲು ಬೇಡವೆನ್ನಲಿಲ್ಲ. ನಾವು ಮಲಗಿದ ಮೇಲೆ...."

"ಮಲಗಿದ ಮೇಲೆ?"

"ಅಂ..... ಏನು ಇಲ್ಲ. ಮಲಗಿದ್ದ ಮೇಲೆ ನಾನು ನೋಡಲಿಲ್ಲ ದಿನ ರಾತ್ರಿ ತುಂಬಾ ಹೊತ್ತು ಇಂಟರ್ನೆಟ್ ಮುಂದೆ ಇರುತ್ತಿದ್ರುಲ್ಲಾ...."

"ನಿಂಗೆ ನೆನ್ನೆ ರಾತ್ರಿ ದಿನದಂತೆ ಎಚ್ಚರಿಕೆ ಆಗ್ಲಿಲ್ವಾ?"

"ಇ.... ಇಲ್ಲ" ಶಾಲಿನಿ ಎದ್ದು ಕೂತಳು.

"ಕೇಶವ ಎಷ್ಟು ಗಿಲ್ಟಿಯಾಗಿ ಫೀಲ್ ಮಾಡ್ತಿದ್ದೀರಾ...?"

"ಊಂ"

"ಅವರು ಮಾಡಿದ್ದು ಎಷ್ಟು ತಪ್ಪು ಅಂತ ಯೋಚನೆ ಮಾಡಿದಿರಾ ನಮ್ಮನ್ನು ಬಟ್ಟೆ ಬಿಚ್ಚಿ ಬೀದಿಯಲ್ಲಿ ನಿಲ್ಲಿಸಿ ಬಿಟ್ರುಲ್ಲ..."

"ಅವರೇನು ಬೇಕು ಅಂತ ಮಾಡಿದರೆ. ಥಿಂಕ್ ಆಫ್ ಹಿಸ್ ಪೇನ್ ".

"ಅವರೇನು ಅಂಥಾ ದಡ್ಡರೇ? ರಿಟೈರ್ಡ್ ಐಎಎಸ್ ಆಫೀಸರ್ ನಮ್ಮ ಮೇಲೆ ದೂಷಣೆ ಬರಬಹುದು ಅಂತ ಯೋಚಿಸ ಬೇಡವೇ? ಆ ಪೋಸ್ಟ್ ಮಾರ್ಟಂ ಆದ್ರೂ ತಪ್ಪಿಸಿಕೊಳ್ಳೋಣ ಅಂದ್ರೆ ಅದು ಆಗ್ಲಿಲ್ಲ. ನಮ್ಮ ಮಗುಗೆ ಎಂಥ ಶಾಕ್ ಆಗುತ್ತೆ ಅಂತ ಅವರು ಯೋಚಿಸಿದ್ರಾ? ಅದಕ್ಕೆ ಅವನನ್ನು ತಕ್ಷಣ ಅಮ್ಮನ ಮನೆಗೆ ಕಳಿಸಿದ್ದು"..

"ನಿಲ್ಸು ಶಾಲಿನಿ, ಅವರೇನು ನಮ್ಮ ಮುಖಕ್ಕೆ ಮಸಿ ಬಳಿಯೋಕೆ ಹೀಗೆ ಮಾಡಿದ್ರಾ?"

"ಹಾಗೆ ತಿಳ್ಕೊಳ್ಳಿ ಇನ್ವ್ಯಾಕ್ಟ್ ಈ ರಿಜೆಕ್ಟೆಡ್ ಅಸ್, ಇದು ಸ್ವಾರ್ಥದ ಪರಮಾವಧಿ."

ಪಟೀರನಿ ಕೇಶವ ಶಾಲಿನಿಯ ಕೆನ್ನೆ ಒಂದು ಕೊಟ್ಟ ಬದುಕಿನಲ್ಲಿ ಮೊದಲ ಬಾರಿ ಗಂಡನಿಂದ ಏಟು ತಿಂದ ಶಾಲಿನಿ ತತ್ತರಿಸಿದಳು.

"ಸಾರಿ"ಎಂದ ಕೇಶವ ತಕ್ಷಣವೇ.

ಹೆದರಿದ್ದ ಶಾಲಿನಿ ಸ್ವಲ್ಪ ಚೇತರಿಸಿಕೊಂಡಳು. ಅಳತೊಡಗಿದಳು.

"ಕೊನೆಗೆ ಇಷ್ಟೇ ಊರವರಿಂದ ಅನಿಸಿಕೊಳ್ಳೋದು ಸಾಲದು ಅಂತ ನೀವು ಅವಮಾನ ಮಾಡಿ. ನಿಮಗೋಸ್ಕರ, ನಿಮ್ಮ ಅಪ್ಪ- ಅಮ್ಮಂಗೋಸ್ಕರ ನಾಎಷ್ಟು ಮಾಡಿದೆ, ನಂಗೂ ಕೆಲಸಕ್ಕೆ ಸೇರ ಬೇಕೂಂತ  ಎಷ್ಟು ಆಸೆ ಇತ್ತು ಆದರೆ ಇವರನ್ನು ನೋಡ್ಕೋಬೇಕು ಅಂತ ಸೇರ್ಕೊಳ್ಳಲಿಲ್ಲ ನೀವೇನು ಬೆಳಿಗ್ಗೆ ಹೋಗಿ ಸಂಜೆ ಮನೆಗೆ ಬರೋ ಗಂಡಸು. ಅವರಿಗೆ ಪಥ್ಯದ ಅಡಿಗೆ, ಕಣ್ಣಿಗೆ ಡ್ರಾಪ್ಸ್,ಡಾಕ್ಟರ್ ವಿಸಿಟ್ ಒಂದೇ ಎರಡೇ... ಆ ಅಚ್ಚುತ ಆರಾಮಾಗಿ ಅಮೆರಿಕದಲ್ಲಿ ಕೂತ್ಬಿಟ್ಟಿದ್ದಾನಲ್ಲ ಪಾಪ, ಅವನನ್ಯಾರೂ ಕೇಳೋರೆ ಇಲ್ಲ. ವಾರಕ್ಕೆರಡು ಸಲ ಫೋನ್ ಮಾಡ್ತಿದ್ದ. ಕಂಪ್ಯೂಟರ್ ಬೇರೆ ತಂದು ಕೊಟ್ಟಿದ್ದಾನೆ ತಂದೆಗೆ. 40,000 ಖರ್ಚು ಮಾಡಿ ದೂರ ಭಾರ ಇನ್ನೇನು ಮಾಡ್ತಾನೆ ಅಂತಾರೆ. ನಮ್ಮದೇ ತಪ್ಪು. ಹೇಗೆ ನೋಡಿಕೊಂಡು ತಂದೇನ, ಮೊಮ್ಮೋಗುನ ತಾತನೇ ನೋಡ್ಕೋತಿದ್ರುಂತೆ. ದಿನವೆಲ್ಲ ಕಂಪ್ಯೂಟರ್ ತಗೊಂಡು ಆ ಮುದುಕರೇನು ಮಾಡ್ತಾರೆ, ಇವರ ಮಗನಿಗೆ ಅನುಕೂಲ ಆಯ್ತು ಅಂತ. ಎಲ್ಲರ ಕಣ್ಣು ನಮ್ಮ ಮೇಲೆ. ಒಂದು ಚೀಟು ಬರೆದಿಟ್ಟರು. ತಮ್ಮ ಕರ್ತವ್ಯ ಆಯ್ತು ಅಂತ ಅಂದುಕೊಂಡ್ರು. ನೋಡಿ ಸುಮ್ಮನೆ ಇರುತ್ತಾರೆ ಅದಕ್ಕೂ ಅಂತಾರೆ. ಎಷ್ಟು ಒಳ್ಳೆ ಮನುಷ್ಯ ಅಂತ ಮಗ ಸೊಸೆಗೆ ತೊಂದರೆ ಆಗಬಾರದು ಅಂತ ಸಂಕಟದ ಸಮಯದಲ್ಲಿ ಚೀಟಿ ಬರೆದಿಡೋದು ಮರೆಯಲಿಲ್ಲ ಅಂತ ಅವತ್ತು ರಾತ್ರಿ ನಾನು..."

"ಏನು ಅವತ್ತು ರಾತ್ರಿ?"

ಶಾಲಿನಿ ದಡಕ್ಕನೇ ಎದ್ದು ಬಚ್ಚಲು ಮನೆಗೆ ಹೋದಳು ಚೆನ್ನಾಗಿ ತಣ್ಣೀರು ಮುಖಕ್ಕೆ ಹಚ್ಚಿಕೊಂಡಳು ಕೇಶವನಿಗೆ ಅವಳ ಮೇಲಿನ ಕೋಪ ಇಳಿಯಿತು. ಪಾಪ ತನ್ನ ಅಸಹಾಯಕತೆ ಅವಳ ಮೇಲೆ ತೀರಿಸಿಕೊಂಡೆ ಎನ್ನಿಸಿ ಕಣ್ಣಲ್ಲಿ ನೀರಾಡಿತ. ಏನೋ ಹೇಳಲು ಹೊರಟಿದ್ದಳೆ ಶಾಲಿನಿ...

ಶಾಲಿನಿ ಬಂದು "ಮಲಕೊಳ್ಳಿ ಅರ್ಧ ರಾತ್ರಿ ಆಯ್ತು" ಎಂದಳು ಎರಡು ಕಾಂಪೋಸ್ ಗುಳಿಗೆ ಕೈಯಲ್ಲಿಟ್ಟು ನೀರು ಕೊಟ್ಟಳು.

ಸದ್ಯದ ಕೆಲಸಗಳು ಶುರುವಾಗಿದ್ವೇ ಬೆಳಗ್ಗೆ ಎಲ್ಲ ಶಾಸ್ತ್ರಿಗಳ ಓಡಾ ಟ, ಮಂತ್ರಗಳ ಪಠಣ, ಗಂಧ, ಧೂಪ, ಊದುಕಡ್ಡಿ, ಹೊಗೆ ವಾಸನೆ. ಈಗ ಸಾವಿತ್ರಮ್ಮನ ಫೋಟೋ ಪಕ್ಕದಲ್ಲಿ ರಂಗಯ್ಯನವರ ಎನ್ಲಾರ್ಜ್ ಮಾಡಿಸಿದ ಫೋಟೋ. ಎರಡಕ್ಕೂ ಮಲ್ಲಿಗೆ ಹೂವಿನ ಹಾರ.

ಇದೆಲ್ಲದರ ನಡುವೆ ನೀಲಿ ಜೀನ್ಸ್ ಬಿಳಿ, ಟಿ-ಶರ್ಟ್ ಧರಿಸಿ ಬೆನ್ನ ಮೇಲೆ ಮಗು ಗಾರ್ಗಿಯನ್ನು ಹೊತ್ತು ಭೂತಾಕಾರದ ಸೂಟ್ ಕೇಸ್ ಗಳೊಂದಿಗೆ ಬಂದು ಇಳಿದ ಅಚ್ಯುತ. ನ್ಯಾನ್ಸಿ ಮುಂದಿನ ಕೋಣೆ ಪೂರ್ತಿ ಆವರಿಸಿ ಬಿಟ್ಟರು. ರೂಮಿನ ತುಂಬಾ ಹಾಲಿನ ಪುಡಿ ಡಬ್ಬಗಳು, ನೀರಿನ ಬಾಟ್ಲಿಗಳು, ಜ್ಯೂಸ್ ಗಳು, ಮಲಗಿಸುವ ಗಾಡಿ, ಪಾಟಿ ಅಷ್ಟರ ಮೇಲೂ ಅಮೇರಿಕಾ ಪರಿಮಳದ ಮುಸುಕು.

ಬಂದವನೇ ಅಚ್ಚುತ ಕೇಶವನ್ನು ತಬ್ಬಿಕೊಂಡು ಗದ್ಗದನಾದ. ಕೇಶವ ಅವನ ಬೆನ್ನು ತಟ್ಟಿ ಸ್ನಾನ ಮಾಡು ಹೋಗು ಆಮೇಲೆ ಮಾತಾಡೋಣ ಎಂದ. ಹೀಗೆ ಎಷ್ಟೋ ಹೊತ್ತು ಅಣ್ಣ ತಮ್ಮ ಇಲ್ಲದ ಕೆಲಸ ಹುಡುಕಿಕೊಂಡು ಕಣ್ಣು ತಪ್ಪಿಸಿ ಓಡಾಡಿದರು. ಊಟದ ಸಮಯದಲ್ಲೂ ಮೌನ. ಕೊನೆಗೆ ಎಲ್ಲರೂ ಸೇರಿದ್ದು ಸಂಜೆ ನಾಲ್ಕು ಗಂಟೆಗೆ. ಶಾಸ್ತ್ರಿಗಳೆಲ್ಲ ಮನೆ ಸೇರಿ ಬರುವ ಗಲಾಟೆಯು ಬೆಳಿಗ್ಗೆ ಮುಗಿದು ಶಾಂತವಾಗಿದ್ದಾಗ.

ಯಾರೂ ಮಾತಾಡದಿದ್ದಾಗ ಶಾಲಿನಿಯೇ ಪ್ರಾರಂಭಿಸಿದಳು.

"ನೋಡಿ ಅಷ್ಟು ಖುಷಿಯಾಗಿದ್ದರೆ ದಿನವೆಲ್ಲ, ಸಂಜೆ ರಾಜುಗೆ ಬಟ್ಟೆ ಬದಲಿಸಿ ವಾಕ್ ಹೋಗಿ ಬಂದು ಅವನೊಡನೆ ಸ್ಕ್ರಾಬಲ್ ಆಡುವುದನ್ನು ತಪ್ಪಿಸಲಿಲ್ಲ. ಚೆನ್ನಾಗಿ ಊಟ ಮಾಡಿದರು. ಹಿಂದಿನ ರಾತ್ರಿ ಇಂಟರ್ನೆಟ್ ನಲ್ಲಿ ಓದಿದ ಜೋಕುಗಳನ್ನು ಹೇಳಿದರು. ಅವರ ಸ್ನೇಹಿತರು ಹಾಗೆ ಅಂತಾರೆ, ಸಂಜೆ ವಾಕ್ ಹೋದಾಗಲೂ ನಾರ್ಮಲ್ ಆಗೇ ಇದ್ದರೂ ಅಂತ....."

**ಮುಂದುವರೆಯುವುದು.....**

# ಹೀಗೊಂದು ಅರ್ಧ ಶತಕದ ಹಿಂದಿನ ಪ್ರವಾಸ ಕಥನ



ಡಾ| ಸುಮಾ ದ್ವಾರಕಾನಾಥ್

ಇದು ಒಂದು ಪ್ರವಾಸದ ಕಥನವಲ್ಲ. ಜೀವನದುದ್ದಕ್ಕೂ ಪಯಣಿಸಿದ ಚಿತ್ರಣ. ಹಿಂದೆ ನಮ್ಮ ಕಾಲದಲ್ಲಿ ಪ್ರವಾಸ ಅಂತ ಬಾಯಲ್ಲಿ ಹೇಳದಿದ್ರೂ, ಪ್ರತಿವರ್ಷವೂ ಊರು ಬಿಟ್ಟು ಕೆಲವು ದಿನಗಳ ಮಟ್ಟಿಗೆ ಸಂಸಾರ ಸಮೇತ ಹಳ್ಳಿಗಳಿಗೆ ಹೋಗಿ ರಜಾದಿನಗಳನ್ನುಕಳೆಯುವುದಿತ್ತು. ಅಥವಾ ಜಾತ್ರೆ, ಜಾಪತ್ತು ಅಂತಾ ಎತ್ತಿನ ಗಾಡಿ ಕಟ್ಟಿಸಿಕೊಂಡೋ, ಸ್ವಾಮಿಕಾರ್ಯ ಸ್ವಕಾರ್ಯವಾಗಿ ಮನೆ ಮಂದಿಯೆಲ್ಲಾ ಹೋಗುವ ಅಭ್ಯಾಸ ಇತ್ತು. ಅಂಥಾ ಅನುಭವಗಳ ನೆನಪೇ ಈ ಒಂದು ವಿಭಿನ್ನ ಪ್ರವಾಸಗಳ ಗುಚ್ಛ. ಹೀಗೇ ಕಾಲಕಾಲಕ್ಕೆ, ಪ್ರವಾಸಗಳ ರೂಪುರೇಷೆಯೇ ಬದಲಾಗುವುದನ್ನು ನೀವು ಮುಂದಿನ ಸರಣಿಗಳಲ್ಲಿ ಕಾಣಬಹುದು.

ಬದುಕೇ ಒಂದು ಪ್ರವಾಸ. ಮಾನವ ಸಂಘ ಜೀವಿ ಆದ್ರಿಂದ ಅವನ ಮನಸ್ಸು ಹೊಸ ಹೊಸ ಅನುಭವಗಳಿಗೆ ತೆರೆದುಕೊಳ್ಳಲು ಸದಾ ಹಾತೊರೆಯುತ್ತಿರುತ್ತದೆ. ಅಂಥಾ ಒಂದು ಅನುಭವ ಸುಮಾರು ೧೯೫೪ ನೆಯ ಇಸವಿಯದು. ಆಗೆಲ್ಲಾ ಪ್ರವಾಸ ಅಂದ್ರೆ, ಈಗಿನಂತೆ ಟೂರ್, ಟ್ರಾವೆಲ್ಸ್ ಅನ್ನೋ ಹಾವಳಿ ಇರ್ಲಿಲ್ಲ. ಸ್ಕೂಲಿಗೆ ರಜ ಬಂತೂ ಅಂದ ತಕ್ಷಣ, ರಿಸಲ್ಟ್ ಗೂ ಕಾಯದೆ, ಅಜ್ಜಿ ಊರಿಗೆ ರಜಾ ಮುಗಿಯುವ ತನಕ ಹೋಗಿ ಬರೋದು. ಹೋಗೋ ಬರೋ ಬಸ್ ಚಾರ್ಜ್ ಹೊಂದಿಸ್ಕೊಂಡ್ರೆ ಸಾಕು. ರಜಾ ಮುಗಿಯುವ ತನಕ ಹಿಂದೆ ನೋಡ್ತಿರಲಿಲ್ಲ. ಹೀಗೇ ಸುಮಾರು ೧೫-೨೦ ವರ್ಷ ಒಂದೇ ಕಡೆಗೆ ಹೋಗಿ ರಜಾ ಕಳೆದು ಬರ್ತಿದ್ವಿ. ನಮ್ಮ ತಲೆಮಾರು, ಜೀವನ ಸಂಧ್ಯೆಯಲ್ಲಿರೋದ್ರಿಂದ, ಆ ಕಾಲದ ನೆನಪನ್ನು ನಿಮ್ಮ ಜೊತೆ ಹಂಚಿಕೊಳ್ಳೋಣ ಅಂತ ಈ ಲೇಖನ.

ನಾನು ಹುಟ್ಟಿ ಬೆಳೆದದ್ದು ಬೆಂಗಳೂರಾದ್ರೂ, ೩೦ ಮೈಲಿ ದೂರದಲ್ಲಿದ್ದ ತ್ಯಾಮಗೊಂಡ್ಲುಎನ್ನುವ ಹಳ್ಳಿಗೆ ಹಳ್ಳಿಯೂ ಅಲ್ಲದ, ಒಂದು ಟೌನ್ ನಲ್ಲಿನ ಪ್ರಭಾವ ಇವತ್ತಿಗೂ ನನ್ನ ಮೇಲಿದೆ. ಮಧ್ಯಮವರ್ಗದವರಾದರೂ ಅಜ್ಜಿ ತಾತ ಸಂತುಷ್ಟ ಜೀವನ ನಡೆಸುತ್ತಿದ್ದರು. ಪರೀಕ್ಷೆ ಮುಗೀತು ಅಂದ್ರೆ, ನಾವು ತಾಯಿ, ನಾಲ್ಕು ಮಕ್ಕಳೇ ಅಲ್ಲದೆ, ನಮ್ಮ ಚಿಕ್ಕಮ್ಮ ತುಮಕೂರಿನಿಂದ ಅವಳ ಮೂರು ಮಕ್ಕಳೊಂದಿಗೆ ಅಜ್ಜಿ ಊರಿಗೆ, ನಮ್ಮ ಜೊತೆ ಬಂದಿಳಿಯೋಳು. ನಮ್ಮ ಸೋದರ ಮಾವನ ಇಬ್ಬರು ಮಕ್ಕಳು ಜೊತೆಗೂಡೋರು. ಹೀಗಾಗಿ ನಾವು ಸುಮಾರು ೧೫-೨೦ ಜನವಂತೂ ಎರಡು ತಿಂಗಳು ಒಂದೇ ಮನೇಲಿರ್ತಿದ್ವಿ.

ತಾತ, ೮ ಮೈಲಿ ದೂರದ ಶಿವಗಂಗೆಯ ಸ್ಕೂಲಿನಲ್ಲಿ ಹೆಡ್ಮೇಷ್ಟ್ರಾಗಿದ್ದರು. ಜೊತೆಗೆ ಸುತ್ತಲ ಘಾಸಲೆಯ ಜೋಡೀದಾರಿಕೆ ಬೇರೆ. ಅದರ ಆದಾಯ ಗೊತ್ತಿಲ್ಲ, ಹೊಲ ಗದ್ದೆ ಯಿಂದ ಅವರ ಜೀವನ ನಡೀತಿತ್ತು. ನಾವು ಇಷ್ಟು ಜನರ ಊಟ ತಿಂಡಿನ ಹೊತ್ತುಹೊತ್ತಿಗೆ ಅಜ್ಜಿ ಹೇಗೆ ಪೂರೈಸುತ್ತಿದ್ದರೋ ಈಗ ನೆನಪಿಸಿಕೊಂಡ್ರೆ ಆಶ್ಚರ್ಯ ಆಗುತ್ತೆ.

ಊರ ಬಗ್ಗೆ ಹೇಳೋದಾದ್ರೆ, ಕೋಟೆ, ಪೇಟೆ, ಕುಂಬಾರ ಬೀದಿ, ನೇಕಾರ ಬೀದಿ ಅಂತೆಲ್ಲ ಹರಡಿಕೊಂಡಿತ್ತು. ಗಂಗರ ಕಾಲದ ಆಳ್ವಿಕೆ ಇರಬೇಕು. ಕೋಟೇಲಿ ಏಳೆಂಟು ಬ್ರಾಹ್ಮಣರ ಮನೆಗಳಿದ್ವು. ಪಾಳು ಬಿದ್ದ ಹನುಮಂತನ ಗುಡಿಯಿಂದ ಕೋಟೆ ಶುರುವಾದ್ರೆ, ಶಾನುಭೋಗ್ ಅಶ್ವತ್ಥಪ್ಪನವರ ಮನೆ, ಅವರ ಮನೆ ಪಕ್ಕ ಒಂದು ಶಿವನ ದೇಗುಲ, ಪಕ್ಕದ್ದೇ ದೊಣ್ಣೆಯ್ಯಪ್ಪನೋರ ಮನೆ, ರಸ್ತೆ ಮಧ್ಯದಲ್ಲೇ ಸಣ್ಣ ಮಾರಮ್ಮನ ಗುಡಿ. ಮಕ್ಕಳಿಗೆ ಢಡಾರ ಮುಂತಾದುವು ಬಂದ್ರೆ, ಹತ್ತು ದಿನ ಆದ್ಮೇಲೆ ಬೇವಿನಸೊಪ್ಪಿನಿಂದ ಸ್ನಾನ ಮಾಡಿಸಿ, ಮಾರಮ್ಮನಿಗೆ ಮೊಸರನ್ನದ ನೈವೇದ್ಯ ಮಾಡಿದರಾಯಿತು ಮಕ್ಕಳು ಆರೋಗ್ಯವಾಗಿರೋರು. ಮುಂದೆ ಬಂದ್ರೆ ನಮ್ಮನೆ ಅಂದ್ರೆ ತಾತ ಶ್ರೀನಿವಾಸರಾಯರ ಮನೆ, ಎದುರುಗಡೆ ಶಾನುಭೋಗ ವೆಂಕಟರಾಮಯ್ಯನೋರ ಮನೆ, ಅವರ ಎದುರಿಗೇ ಊರಿಗೆ ವರ್ಗವಾಗಿ ಬಂದ ಕನ್ನಡ ಮೇಷ್ಟ್ರು ಲಕ್ಷ್ಮೀನಾರಾಯಣ ಅವರ ಮನೆ. ಪಕ್ಕದಲ್ಲೇ ದೊಡ್ಡ ಕೋಟೆ ಭಾವಿ. ನಾಲ್ಕು ರಾಟೆಗಳಿರುವ ಉಪ್ಪು ನೀರಿನ ಭಾವಿ. ಸರ್ ಎಮ್ ವಿಶ್ವೇಶ್ವರಯ್ಯನವರು, ಸೂಚಿಸಿದ್ದ ನೀರಿನ ಸೆಲೆ ಕೋಟೆಗೆಲ್ಲಾ ನೀರುಣಿಸುತ್ತಿತ್ತು. ಇನ್ನೊಂದು ಬದಿಗೆ ನಾರಣಮ್ಮನವರ ಮನೆ, ಹಾಗೇ ಬಿಲ್ಲನ ಕೋಟೆ ಮನೆಗೆ ರಸ್ತೆ ಕೊನೆಗೊಳ್ಳುತ್ತಿತ್ತು. ಮಲ್ಲಪ್ಪ ಅನ್ನೋ ಮುದುಕರು ಅಲ್ಲೊಂದು ಗಣೇಶನ ಗುಡಿಯನ್ನು ವಾಸ್ತವ್ಯಕ್ಕೂ ಬಳಸಿಕೊಂಡು ಕಾಲಹರಣ ಮಾಡ್ತಿದ್ರು. ಅದರ ಮುಂದಕ್ಕೆ ರಾತ್ರೋ ರಾತ್ರಿ ಲಾರಿಗಳು ಬಂದು ಮಣ್ಣು ಅಗೆದು ತುಂಬಿಕೊಂಡು ಹೋಗಿ ಆ ಭಾಗವೆಲ್ಲಾ ಅಗಳ್ತೆ ಮಾಡಿಬಿಟ್ಟಿದ್ರು. ಅವರುಗಳು, ಹಿಂದಿನೋರು ಹೂತಿಟ್ಟಿದ್ದ ದೊಡ್ಡ ದೊಡ್ಡ ಪಾತ್ರೆ ಪಡಗ ಎಲ್ಲಾ ದೋಚಿಕೊಂಡು ಹೋಗ್ತಿದ್ರು ಅಂತ ಊರೋರು ಹೇಳೋರು. ಈ ಕಡೆ ತಿರುವಿನಲ್ಲಿ ಬಹುಶಃ ಗಂಗರ ಕಾಲದಲ್ಲಿ ಕಟ್ಟಿದ ಚೆಲುವರಾಯ ಸ್ವಾಮಿ ದೇಗುಲ. ಪುಣ್ಯಕ್ಕೆ ಆ ದೇಗುಲದಲ್ಲಿ ಆಗಾಗ ಪೂಜೆ ನಡೀತಿತ್ತು. ಸಂಜೆ ಹೊತ್ತು ದಿನಾಲೂ ಊರ ಹೆಣ್ಣು ಮಕ್ಕಳ ಜೊತೆ ನಾವು ಊರಿಂದ ಹೋದೋರೂ ಸಹ ಮುಂಬಾಗಿಲಲ್ಲಿದ್ದ ಸಣ್ಣ ಆಂಜನೇಯನಿಗೆ ದೀಪಹಚ್ಚಿ, ಭಜನೆ ಮಾಡ್ತಿದ್ವು. ಅಲ್ಲಿ ಕಲಿತ ಭಜನೆ ಇಂದಿಗೂ ಮರೆತಿಲ್ಲ. ದೇಗುಲದ ಪಕ್ಕದಲ್ಲೇ ಹಿಂದಕ್ಕೆ ಊರಿನ ಪೋಸ್ಟ್ ಆಫೀಸ್. ಅಲ್ಲಿ ನಮ್ಮ ಚಿಕ್ಕ ತಾತ ಶ್ರೀನಿವಾಸ ರಾಯರೇ ಪೋಸ್ಟ್ ಮಾಸ್ಟರ್. ತಮಾಷೆಯೆಂದರೆ ಊರಿಗೆ ಬಂದ ಕಾಗದಗಳನ್ನೆಲ್ಲಾ ಅವರೇ ಓದಿ ಹೇಳಬೇಕಾಗಿತ್ತು. ಅವರ ಮನೆ ಪಕ್ಕ ಒಂದು ರಾಮ ಮಂದಿರ. ಸುಮಾರಾಗಿ ಊರ ಧಾರ್ಮಿಕ ಉತ್ಸವಗಳು ಅಲ್ಲೇ ನಡೆಯುತ್ತಿದ್ದವು. ಎದುರಿಗೆ ನಂಜುಡಪ್ಪನೋರ ಮನೆ. ರಾಮಮಂದಿರ ಪಕ್ಕದ್ದೇ ಊರ ಪುರೋಹಿತ ಚಿದಂಬರ ಭಟ್ಟರ ಮನೆ. ಅವರ ಮಂತ್ರಕ್ಕಿಂತ ಉಗುಳೇ ಜಾಸ್ತಿ ಅಂತ

ಊರವರು ತಮಾಷೆ ಮಾಡೋರು. ಇನ್ನೊಂದೆರಡು ಮನೆ ಬಿಟ್ರೆ ಕೋಟೆ ವಿಶೇಷ ಮುಗೀತು. ಶುರುವಿನಲ್ಲೇ ಬಸ್ ಸ್ಟಾಂಡ್ ನಿಂದ ಬರ್ತಾ ಮೊದಲು ಸಿಗೋ ಮನೆಯೇ ಜೀವಿ ಶಾಸ್ತ್ರಿಗಳದ್ದು. ಅಪ್ಪ ಪೌರೋಹಿತಕೆ ಮಾಡಿದ್ರೂ ಮಗ ಗುರುಸತ್ಯ ಬೀಡಿ ಸೇದ್ಕೊಂಡೇ ನೂರಾರು ಮಕ್ಕಳಿಗೆ ಪಾಠ ಹೇಳಿ ವಿದ್ಯಾ ದಾನ ಮಾಡಿದ್ದ. ಇದು ನಮ್ಮ ಕೋಟೆಯ ಪರಿಸರ. ರಜಾ ದಿನಗಳ ಸಾಮ್ರಾಜ್ಯ.

ಇನ್ನು ನಮ್ಮ ತಾತನ ಮನೆ. ಗೇಟು ತೆರೆದು ಹೋದರೆ ಬಾಗಿಲಿನ ಎರಡೂ ಕಡೆಯಲ್ಲಿ ಕಲ್ಲಿನ ಜಗಲಿ. ಅಂಗಳದಲ್ಲಿ ಎಡಗಡೆ ಕೊನೆಗೆ ಜಗಲಿ ಮೇಲೆ ತುಳಸಿ ಬೃಂದಾವನ ಇದ್ರೆ, ಬಲಗಡೆ ಜಗಲಿ ಕೊನೆಯಲ್ಲಿ ಒಂದು ತೊಟ್ಟಿ ಮತ್ತು ಬಚ್ಚಲು. ಒಳಗೆ ನಡವಿ ಅಂತ ಕರೀತಿದ್ದ ಜಾಗದಲ್ಲಿ ರಾತ್ರಿ ಹೊತ್ತು ಹಸು ಕರುವನ್ನು ಕಟ್ಟಿ ಹಾಕುತ್ತಿದ್ರು. ಎಡಗಡೆ ಒಂದು ಸಣ್ಣ ರೂಮ್. ಮುಂದೆ ನಡುಮನೆ ಮತ್ತೆ ಎಡಗಡೆ ಗೆ ಬಾಣಂತಿ ರೂಮು. ದೊಡ್ಡ ದೊಡ್ಡ ವಾಡೆಗಳಲ್ಲಿ ರಾಗಿ, ಬತ್ತ ತುಂಬಿರೋರು. ನಡುಮನೆಯಿಂದ ಮುಂದೆ ಅಡುಗೆ ಮನೆ. ಅದರ ಪಕ್ಕದ್ದೇ ಬಚ್ಚಲ ಮನೆ. ಬಚ್ಚಲು ಮನೆಯೋ ಕತ್ತಲ ಗೂಡು. ಸ್ನಾನಕ್ಕೆ ದೊಡ್ಡ ಕಲ್ಲಿನಿಂದ ಕಟ್ಟಿದ ತೊಟ್ಟಿಯೊಳಗೆ ಇಳೀ ಬೇಕಾಗ್ತಿತ್ತು. ಒಳಗೆ ಏನು ಹುಳ ಹುಪ್ಪಟೆ ಇರುತ್ತೋ ಅಂತ ನಮಗೆ ಭಯ. ವಿದ್ಯುತ್ ಬೆಳಕು ಇದ್ರೂ, ಮಿಣಿ ಮಿಣಿದೀಪ ಆದ್ರಿಂದ ಹೆದರಿಕೊಂಡೇ ಸ್ನಾನ ಮುಗಿಸುತ್ತಿದ್ದೆವು. ನಡುಮನೆಯಲ್ಲಿ ಮಹಡಿಗೆ ಹತ್ತಲುಮರದ ಮೆಟ್ಟಿಲು. ಮೇಲುಗಡೆ ಸಣ್ಣ ಸಣ್ಣ ನಾಲ್ಕು ಕಿಟಕಿಗಳಿರುವ ಒಂದು ದೊಡ್ಡ ಹಾಲು. ಮೇಲೆ ಹೆಂಚಿನ ಮಾಡು. ಅಲ್ಲಿ ಮಾವಿನ ಹಣ್ಣಿನ ಕಾಲದಲ್ಲಿ ಒಂದು ಮೂಲೇಲಿ ಮಾವಿನ ರಾಶಿ ಒಟ್ಟಿರೋರು. ದಿನಾ ಅಜ್ಜಿ ಮೇಲೆ ಬಂದು ಹಣ್ಣಾಗಿರೋ ಮಾವಿನ ಹಣ್ಣು ಆರಿಸಿ ನಮಗೆ ತಿನ್ನೋಕೆ ಕೊಡೋರು. ಇಷ್ಟಿತ್ತು ನಮ್ಮಅಜ್ಜಿ ಮನೆ. -ಅದು ನಮಗೆ ಎಲ್ಲಾ ರೀತಿಯಲ್ಲೂ ಮನರಂಜನೆ ನೀಡುವ ಜಾಗವೂ ಆಗಿತ್ತು.

ನಮ್ಮ ರಜಾ ದಿನಚರಿ ಹೀಗಿರ್ತಿತ್ತು. ಬೆಳಗ್ಗೆ ಎದ್ದು ಕಾಫಿ ಕುಡಿದ ಮೇಲೆ ಮಕ್ಕಳೆಲ್ರೂ ಸ್ನಾನ ಮಾಡಿ ತಿಂಡಿ ತಿನ್ಬೇಕಾಗಿತ್ತು. ಊರಿನ ಇನ್ನೊಂದು ವಿಶೇಷವೇನೆಂದ್ರೆ, ಅಲ್ಲಿ ಇನ್ನೂ ಒಳಚರಂಡಿ ವ್ಯವಸ್ಥೆ ಆಗಿರಲಿಲ್ಲ. ಗಂಡಸರು ಬೆಳಗಾಗೆದ್ದು ಅದಕ್ಕೆಂದೇ ಮಾಡಿಸಿದ ಗೂಡಿನಲ್ಲಿಟ್ಟಿದ್ದ ತಂಬಿಗೇಲಿ ನೀರು ತುಂಬಿಕೊಂಡು ಹೋಗಿ ಕೆಲಸ ಮುಗಿಸಿ ಬರ್ತಿದ್ರು. ಆದ್ರೆ ಹೆಂಗಸರಿಗೆ ಕೆಲವರ ಮನೇಲಿ ಮಾತ್ರ ಶೌಚಾಲಯ ಇರ್ತಿತ್ತು. ಅದೂ ಮನೇ ಹಿಂದುಗಡೆ ಒಂದು ದೊಡ್ಡ ಗುಂಡಿ ತೋಡಿ, ಎರಡು ಹಾಸು ಕಲ್ಲನ್ನು ಸ್ವಲ್ಪ ಅಂತರದಲ್ಲಿ ಹಾಕಿರೋರು. ಸುತ್ತಲೂ ಕಳ್ಳಿ ಬೆಳಸಿ ಮರೆ ಮಾಡಿರೋರು. ಅದೊಂದು ನಮಗೆಲ್ಲಾ ಕಷ್ಟ ಅನ್ನಿಸೋದು.

ತಿಂಡಿ ತಿಂದ ಮೇಲೆ ನಮ್ಮ ಮೊದಲ ಕೆಲಸವೆಂದ್ರೆ ಒಂದೊಂದು ಬಿಂದಿಗೆ ಹಿಡಿದು ಸಿಹಿ ನೀರು ತರಲು ಅರ್ಧ ಮೈಲು ದೂರವಿರುವ ಸಿಹಿ ನೀರಿನ ಭಾವಿಯಿಂದ ಕುಡಿಯುವ ನೀರು ತರಬೇಕಾಗಿತ್ತು. ಅದನ್ನು ಕೆಲಸವೆಂದುಕೊಳ್ಳದೆ ಕೋಟೆಯ ಹುಡುಗಿಯರು ತಂಡತಂಡವಾಗಿ ಅವರವರ ಗುಂಪು ಹಿಡಿದು ಹೊರಡುತ್ತಿದ್ದೆವು. ಬಿಸಿಲ ಝಳ ಮುಟ್ಟುವುದರೊಳಗೆ ವಾಪಸ್ಸು ಬರುತ್ತಿದ್ದೆವು. ದಾರಿ ಉದ್ದಕ್ಕೂ ಹರಟೆ ಹೊಡೆಯುತ್ತಾ, ಬಾವಿಯ ಬಳಿ ನಮ್ಮ ತಾಮ್ರದ ಬಿಂದಿಗೆ ಗಳನ್ನು ಹೊಳೆಯುವ ಹಾಗೆ ಉಜ್ಜುವ ಸ್ಪರ್ಧೆ ಬೇರೆ. ಅಂತೂ ಅದೊಂದು ಬೆಳಗ್ಗೆಯ ಮೆರವಣಿಗೆಯಾದ್ರೆ, ಸ್ವಲ್ಪ ಸುಧಾರಿಸಿಕೊಂಡು ಆಮೇಲೆ ಮನೆಯ ಹಂಡೆ, ತೊಟ್ಟಿಗಳಿಗೆ ನೀರು ತುಂಬಬೇಕಿತ್ತ. ಅವಳು ಬರಲಿಲ್ಲ, ಇವಳು ಬರಲಿಲ್ಲ ಅಂತಒಬ್ಬರಿಗೊಬ್ಬರು ಕಾಲೆಳೆಯುತ್ತಲೇ ದೂರುತ್ತಾ ಎಲ್ರೂ ಒಟ್ಟಿಗೆ ಬಿಂದಿಗೆ ಹಿಡಿದು ಹೊರಡುತ್ತಿದ್ದೆವು ಅಷ್ಟು ಹೊತ್ತಿಗೆ ಎಲ್ರದೂ ಸ್ನಾನವಾಗಿ ದೊಡ್ಡ ಹಂಡೆ ತೊಟ್ಟಿ ಎಲ್ಲಾ ಖಾಲಿಯಾಗಿರ್ತಿತ್ತು. ನಮಗೋ ನೀರಿನ ಮಿತವ್ಯಯ ತಿಳೀತಿರಲಿಲ್ಲ. ಹಾಗಾಗಿ ಖಾಲಿ ಯಾದ್ರೆ ನಾವೇ ನೀರು ತುಂಬಿಸಬೇಕಾಗ್ತಿತ್ತು. ನೀರು ಸೇದಿಕೊಡೋರು ಇಬ್ಬರಾದ್ರೆ, ಮೆಟ್ಟಿಲಿಳಿದು ಮನೆತನಕ ತನಕ ತರೋರು ಇನ್ನಿಬ್ಬರು. ಹೀಗೇ ಸರತಿ ಮಾಡಿಕೊಂಡು ಬಿಂದಿಗೆ ನೀರಿನ ಲೆಕ್ಕ ಹಾಕ್ತಿದ್ವಿ. ಎಷ್ಟು ಹೊತ್ತಾದ್ರೂ ಆ ಕೆಲಸ ಮುಗೀದಿದ್ರೆ, ಬಚ್ಚಲು ಮನೆ ಬಚ್ಚಲೂ ತೊಟ್ಟಿಯಂತೆ, ಇದ್ದುದರಿಂದ, ಅದನ್ನೂ ಏನಾದ್ರೂ ತುಂಬಿಸ್ತಿದಾರೋ ಅಂತ ಅನುಮಾನ ಬೇರೆ, ನಮಗೆ. ನೀರು ತುಂಬುವ ಕೆಲಸ ಮುಗಿಯೋ ಹೊತ್ತಿಗೆ ಎಲ್ರಿಗೂ ಹೊಟ್ಟೆ ತಾಳ ಹಾಕೋದಕ್ಕೆ ಶುರುವಾಗ್ತಿತ್ತು. ತಾತನೂ ಮಸೀದಿಯ ನಮಾಜಿನ ಸದ್ದಿಗೇ ಕಾಯ್ತಾ ಇರೋರ ಹಾಗೆ ಅಂಗಾರ ಅಕ್ಷತೆ ಇಟ್ಕೊಂಡು ತಟ್ಟೆ ಹಾಕಿಕೊಂಡು ಬಿಡೋರು. ಸರಿ, ನಾವೂ ಊಟಕ್ಕೆ ತಯಾರು. ಅಲ್ಲಿಗೆ ಅರ್ಧ ದಿನ ಮುಗೀತಿತ್ತು.

ಇಷ್ಟು ನಡುವೆ ಮನೆಯೊಳಗೆ ಅವಲಕ್ಕಿ ಕುಟ್ಟೋ ಕೆಲಸ ನಡೀತಿತ್ತು. ಹಿಂದಿನ ದಿನವೂ ಸುಮಾರು ೧೦ ಸೇರು ಬತ್ತ ಕುದಿಯೋ ನೀರಲ್ಲಿ ನೆನೆಹಾಕಿ, ಕೆಲಸದಾಳುಗಳಿಗೆ ಹೇಳಿ ಬೆಳಗ್ಗೆಯಿಂದಾನೇ ನಡುವೀಲಿ ಒಲೆ ಉರಿ ಹಾಕಿ ಬತ್ತ ಹುರಿಯೋಕೆ ಮನೆಯವರು ಕೂತ್ರೆ, ಹೆಣ್ಣಾಳುಗಳು ಒರಳಿನಲ್ಲಿ ಬತ್ತ ಕುಟ್ಟಿಅವಲಕ್ಕಿ ಮಾಡ್ತಿದ್ರು. ನಮ್ಮ ಚಿಳ್ಳೆಪಿಳ್ಳೆ ಕೆಲಸವೆಂದ್ರೆ, ಹುರಿದ ಬತ್ತಾನ ಕುಟ್ಟೋರಿಗೆ ತಲುಪಿಸೋದು. ಹಾಗೇ ದಿನಾ ಪೂರ್ತಿ ಕಳೆಯೋದು.

ಮಧ್ಯಾಹ್ನ ನಮ್ಮದೇ ಸಮಯ. ಅಲ್ಲಿಯ ಮಕ್ಕಳ ಜೊತೆಗೆ ನಮ್ಮ ಆಟ. ಕುಂಟೆಬಿಲ್ಲೆ, ಕಲ್ಲಾಟ, ಚೌಕಾಭಾರ, ಕವಡೆ ಮುಂತಾದ ಸಾಮಗ್ರಿಗಳೇ ನಮ್ಮ ಆಸ್ತಿ. ಚೈತ್ರ, ವೈಶಾಖ ಮಾಸ ಆದ್ರಿಂದ ಊರ ರಥೋತ್ಸವ, ರಾಮನವಮಿ, ಶಂಕರ ಜಯಂತಿ, ನರಸಿಂಹ ಜಯಂತಿ ಮುಂತಾದುವು ನಮಗೆ ಹುಮ್ಮಸ್ಸು ಕೊಡುತ್ತಿತ್ತು. ದಿನವೆಲ್ಲಾ ಪಾನಕ ಪನಿಹಾರ, ಎಲ್ರ ಮನೇಲೂ ಕೋಸಂಬರಿ, ರಸಾಯನ, ಗೊಜ್ಜವಲಕ್ಕಿ ರುಚಿರುಚಿಯಾಗಿ ಹೊಟ್ಟೆ ತುಂಬಾ ಸಿಗ್ತಿತ್ತು. ಮಧ್ಯೆ ಮಧ್ಯೆ ಸಮಾರಾಧನೆಗಳೂ ನಡೀತಿದ್ವು. ವಸಂತೋತ್ಸವವಂತೂ ಅಜ್ಜಿ ತಂಗಿ ಜಾನಿ ಚಿಕ್ಕಮ್ಮನೋರ ಮನೆ ಸೇವೆ ಆದ್ರಿಂದ ಊರಿಂದ ಅವರ ಕುಟುಂಬದವರೆಲ್ಲಾ ಬಂದು ಒಟ್ಟಿಗೆ ಸೇರೋರು. ಅವರ ಮನೇಲಿ ರಾಮ ದೇವರ ಉತ್ಸವ ಮೂರ್ತಿಯನ್ನು ಕರೆಸಿ ಬಂದವರಿಗೆಲ್ಲಾ ಬೆಳಗ್ಗೆಯಿಂದ ರಾತ್ರಿ ತನಕ ದೇವರನ್ನು ವಾಪಸ್ಸು ದೇವಸ್ಥಾನಕ್ಕೆ ಕರೆದುಕೊಂಡು ಹೋಗುವ ತನಕ ಸಂಭ್ರಮ. ದೇವರ ದರ್ಶನ ಮಾಡೋಕೆ ಬಂದೋರಿಗೆಲ್ಲಾ ನಾವು ಮಕ್ಕಳಾದಿಯಾಗಿ

ಪಾನಕ ಕೋಸಂಬರಿ ಹಂಚೋ ಕೆಲಸವೇ ಖುಷಿ ಕೊಡ್ತಿತ್ತು. ರಾಮನವಮಿ ಸಮಯದಲ್ಲಂತೂ, ಎಂಟು ದಿನವೂ ಸಂಜೆ ಮಕ್ಕಳಿಂದ ಮನರಂಜನೆ ಕಾರ್ಯಕ್ರಮ ಅಂತ ತಾತ, ಆರ್ಯಧರ್ಮೋಜ್ಜೀವನೀ ಸಭಾ ದ ಆಹ್ವಾನ ಪತ್ರಿಕೇಲಿ ಪ್ರಿಂಟ್ ಮಾಡಿಸಿಬಿಟ್ಟಿರೋರು. ರಾಮಮಂದಿರದ ಬಲಗಡೆ ಮೂಲೇಲಿ ೧೦/೧೦ ಜಾಗವೇ ನಮ್ಮ ವೇದಿಕೆ. ಹಿಂದುಗಡೆ ಇದ್ದ ಪುಟ್ಟ ಬಾಗಿಲಿನಿಂದ ಎಂಟ್ರಿ. ಬೆಂಗಳೂರಲ್ಲಿ ಸಣ್ಣ ಪುಟ್ಟ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನುಭವಗಳಿಸಿಕೊಂಡಿದ್ದೀನಿ ಅನ್ಕೊಂಡ ನಾನು, ಅಲ್ಲೀ ಮಕ್ಕಳನ್ನೆಲ್ಲಾ ಸೇರಿಸಿ ಅವರವರ ವಯಸ್ಸಿಗೆ ತಕ್ಕಂತೆ ನಾಟಕ, ನೃತ್ಯ, ಹಾಡು ಮುಂತಾದುವನ್ನೆಲ್ಲಾ ಕಲಿಸಿ ಪ್ರದರ್ಶಿಸುವ ಮುಂದಾಳುತ್ವನೂ ವಹಿಸಿಕೊಂಡಿದ್ದೆ. ಸುಮಾರು ವರ್ಷ ಕೈಲಾಸಂ ನಾಟಕಗಳನ್ನೂ ಪ್ರದರ್ಶಿಸೋ ಧೈರ್ಯ ಮಾಡಿದ್ದೆ ಅಂದ್ರೆ ಈಗ ನಗು ಬರುತ್ತೆ. ಅದಕ್ಕೆ ಮನೆಮಂದಿಯ ಪ್ರೋತ್ಸಾಹವೂ ಸಿಗ್ತಿತ್ತು. ಎಲ್ರೂ ಅವರವರ ಮಕ್ಕಳನ್ನ ಸಿಂಗರಿಸೋದ್ರಲ್ಲಿ ಸಹಕರಿಸೋರು. ಇಂಥಾ ಸಹಜೀವನದಲ್ಲೂ ಮಕ್ಕಳ ಪ್ರತಿಭೆಗೆ ಅವಕಾಶ ಸಿಕ್ಕಿದ್ದು ಖುಷಿ ಕೊಡ್ತಿತ್ತು. ಈಗಲೂ ಅವರೆಲ್ಲಾ ೫೦ ವರ್ಷದ ನಂತರವೂ, ನಾನು ಇಂಥ ಪಾತ್ರ ಮಾಡಿದ್ದೆ ಅಂತ ನೆನಪಿಸಿಕೊಳ್ತಾರೆ.

ಈ ಸಂಭ್ರಮದ ನಡುವೆಯೇ ಬೇಸಗೆ ರಜಕ್ಕೆ, ಸಂತೆ ಮಾಳದಲ್ಲಿ ಸಿನಿಮಾ ಟೆಂಟ್ ಹಾಕೋರು. ಬೆಳಗ್ಗೆ ಹೊತ್ತೇ ಎತ್ತಿನಗಾಡೀಲಿ ಸಿನಿಮಾ ಜಾಹಿರಾತು ಮಾಡಲು ಮೈಕ್ ಹಿಡಿದು ಊರಿನ ಪ್ರತಿಯೊಂದು ಗಲ್ಲೀಲೂ ಪ್ರಚಾರ ಮಾಡೋರು. ಮಕ್ಕಳೇನು, ಅಜ್ಜಿ, ಅಮ್ಮ, ಚಿಕ್ಕಮ್ಮಂದಿರು ದೊಡ್ಡೋರು ಸಹ ಸಂಜೆ ಏಳು ಗಂಟೆಗೇ ಉಂಡು, ಗೋಣೀ ಚೀಲಾನೋ, ಹಳೇ ದುಪ್ಪಿನೋ ಕೈಲಿ ಸುತ್ಕೊಂಡು ಒಂದು ಮೈಲಿ ದೂರವಿದ್ದ ಟೆಂಟಿಗೆ ಹೋಗೋ ಸಂಭ್ರಮ ನೋಡ್ಬೇಕು. ಮುಂದೆ ನೆಲಕ್ಕೆ ನಾಲ್ಕಾಣೆ ಟಿಕೇಟು. ಬೇಗ ಹೋಗಿ ಗೋಣೀ ಚೀಲ ಹಾಸಿ ಎಲ್ರೂ ಕೂತ್ಕೋತಿದ್ವಿ ನಿದ್ದೆ ಬಂದ ಮಕ್ಕಳು ಅಲ್ಲೇ ಸಿನಿಮಾ ನಡೀತಿದ್ದ ಹಾಗೇ ಮಲಗೋರು. ಸಿನಿಮಾ ಮುಗಿದ ಮೇಲೆ ಮಲಗಿದ ಮಕ್ಕಳನ್ನ ಎಬ್ಬಿಸಿ ಮನೆಗೆ ಕರ್ಕೊಂಡು ಹೋಗೋರು. ಕುರ್ಚಿಗಳೂ ಇರ್ತಿದ್ದುವು. ಅದು ಶ್ರೀಮಂತರಿಗೆ ಮಾತ್ರ. ನಾವೂ ಅದರ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ತಿರಲಿಲ್ಲ. ಹಾಗಾಗಿ ಸುಮಾರು ಕನ್ನಡ, ಹಿಂದಿ ತೆಲುಗು ಯಾವ ಭಾಷೆಯಾದ್ರೂ ಸರಿ ಒಳ್ಳೆ ಸಿನಿಮಾ ಬಂದ್ರೆ ತಪ್ಪಿಸ್ತಿರಲಿಲ್ಲ. ಹಾಗಾಗಿ ಕಡಿಮೆ ದುಡ್ನಲ್ಲಿ ಸುಮಾರಷ್ಟು ಸಿನಿಮಾಗಳನ್ನುನೋಡಿದ್ದಾಯಿತು.

ಒಂದು ಸಲ ಡಾ|| ರಾಜಕುಮಾರ್ ಶಿವಗಂಗೆ ಮಹಾತ್ಮೆ ಶೂಟಿಂಗ್ ಮುಗಿಸ್ಕೊಂಡು ನಮ್ಮೂರ ಮೇಲೇ ವಾಪಸ್ಸು ಹೋದಾಗ, ನಮ್ಮೂರ ಮುನಿಸಿಪಾಲಿಟಿಯವರು ಅವನಿಗೆ ಸನ್ಮಾನ ಮಾಡಿದ್ರು. ನಾವೆಲ್ರೂ ಕಾರ್ಯಕ್ರಮಕ್ಕೆ ಹೋಗಿ ನೋಡಿ ಧನ್ಯತಾ ಭಾವ ಅನುಭವಿಸಿ ಬಂದಿದ್ವಿ.

ಮಧ್ಯೆ ಮಧ್ಯೆ ವಿಹಾರ ಅಂತ ಊರಾಚೆ ಇರುವ ಹನುಮಪ್ಪನ ಗುಡಿಗಳಿಗೂ ಗುಂಪು ಕಟ್ಟಿಕೊಂಡು ಹೋಗಿ ಬರ್ತಿದ್ವಿ. ಮೂರು ಮೈಲಿ ದೂರವಿದ್ದ ತಿಪ್ಪಶೆಟ್ಟಿಹಳ್ಳಿಯ ಆಂಜನೇಯ ನ ದೇವಸ್ಥಾನಕ್ಕೆ ಧೂಳಿನ ರಸ್ತೇಲಿ ನಡೆದುಕೊಂಡು ಹೋಗಿ ಬರ್ತಿದ್ವಿ ಆಗೆಲ್ಲಾ ಆಯಾಸವೇ ತಿಳೀತಿರ್ಲಿಲ್ಲ. ಕೆರೆ ಏರಿಮೇಲೆ ಸಿನಿಮಾ ಸ್ಟೈಲಿನಲ್ಲಿ ವಾಕಿಂಗ್ ಹೋಗೋಕೆ ಆಸೆ ಇದ್ರೂ ಮನೆಯೋರು ಪರ್ಮಿಷನ್ ಕೊಡ್ತಿರಲಿಲ್ಲ. ನಮ್ಮ ಚಿಕ್ಕ ತಾತ ಮಣ್ಣೆ ಜಾತ್ರೆ ಅಂತ ಹೇಳಿ ನಮ್ಮನ್ನೆಲ್ಲಾ ಬೆಳಗ್ಗೇನೇ ಹೊರಡಿಸಿಕೊಂಡು ಹೊರಡೋರು. ಸುಮಾರು ಎರಡು -ಮೂರು ಮೈಲಿಯಾದ್ರೂ ಇತ್ತೇನೋ. ಹೊಲದ ಬದುವಿನ ಮೇಲೆ, ರಾಷ್ಟ್ರೀಯ ಹೆದ್ದಾರಿ ದಾಟಿ ಹೋಗಿ ಸಂಜೆ ಬರ್ತಿದ್ವಿ.

ಕಾಮನ ಹುಣ್ಣಿಮೇಲಿ, ಕಾಮಣ್ಣಂಗೆ ಎಂಟು ದಿನ ಬೇರೆ ಬೇರೆ ವೇಷ ಹಾಕೋರು. ಅಲ್ಲಿಗೂ ದಿನಾಲೂ ನಾವು ಗುಂಪು ಕಟ್ಟಿಕೊಂಡು ಹೋಗ್ತಿದ್ವಿ.

ತಾತ ಅಜ್ಜಿ ಕಾಶಿಗೆ ಹೋದಾಗ, ನಾನು ವಯಸ್ಸಿನಲ್ಲಿ ಸ್ವಲ್ಪ ದೊಡ್ಡೋಳಾಗಿದ್ರಿಂದ, ಮನೆ ಜವಾಬ್ದಾರಿ ಬಿದ್ದಿತ್ತು. ಹೊಲದಲ್ಲಿ ಬೆಳೆದ ತರಕಾರಿಗಳಿಗೆ, ರೈತರು ಮಾರಿ ಬಂದ ದುಡ್ಡನ್ನು

ತಂದು ಕೊಟ್ಟರೆ ಲೆಕ್ಕವಿಡಬೇಕಾಗುತ್ತಿತ್ತು. ಹಾಗೇ ನಡುನಡುವೆ ಹೊಲ ಕಾಯಲು ಹೋಗಬೇಕಾಗುತ್ತಿತ್ತು. ಅಲ್ಲಿ ನಾಗರ ಹಾವಿದೆ ಎಂದು ಕೇಳಿದ್ದ ನಾನು ಮನೆಗೆ ಬರುವ ತನಕ ಜೀವ ಕೈಲಿ ಹಿಡಿದಿರುತ್ತಿದ್ದೆ. ನನ್ನ ಚಿಕ್ಕಮ್ಮನೂ ನನ್ನ ಜೊತೆಗಿರುತ್ತಿದ್ದುದರಿಂದ ನಮ್ಮಿಬ್ಬರ ಹರಟೇಲಿ ಹೊತ್ತು ಹೋಗುತ್ತಿದ್ದುದೇ ತಿಳೀತಿರಲಿಲ್ಲ.

ಅಂತೂ ತ್ಯಾಮಗೊಂಡ್ಲು ಪ್ರವಾಸ ಅಜ್ಜಿಯ ಖಾಯಿಲೆಯಿಂದ, ಕೊನೆಗೊಂಡಿತು. ಅಜ್ಜಿಗೆ ಪ್ಲೂರಸಿ ಆಗಿ, ಹಾಸಿಗೆ ಹಿಡಿದಾಗ, ಅವರನ್ನು ತುಮಕೂರು ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿಂದ ಅವರು ಊರಿಗೆ ವಾಪಸ್ಸು ಬಂದರೂ ಮತ್ತೆ ಮೇಲೇಳಲೇ ಇಲ್ಲ. ನಂತರ ತಾತ ನಮ್ಮ ದೊಡ್ಡಮ್ಮನ ಜೊತೆ ಸ್ವಲ್ಪ ವರ್ಷವಿದ್ದು ಅವರ ಅನಾರೋಗ್ಯದಿಂದಾಗಿ ಮನೆ ಮಾರಿ ಬೆಂಗಳೂರು ಸೇರಬೇಕಾಯ್ತು.

ಆದ್ರೆ ನಾವು ಇನ್ನೂ ಊರಿನ ನೆಂಟು ಕಳೆದುಕೊಂಡಿಲ್ಲ. ತಮ್ಮ ಪ್ರಹ್ಲಾದ ಮುಜರಾಯಿ ಇಲಾಖೆಯಿಂದ ಚೆಲುವರಾಯನ ಗುಡಿಯನ್ನು ಜೀರ್ಣೋದ್ದಾರ ಮಾಡಿಸಿದ ಮೇಲೆ ಈಗಲೂ ಒಂದೊಂದು ದಿನದ ಮಟ್ಟಿಗೆ ಹೋಗಿ ಬರುತ್ತಿರುತ್ತೇವೆ. ಅಂದು, ಇಂದಿನ ಸೌಕರ್ಯಗಳಿಲ್ಲದಿದ್ದರೂ ಅಲ್ಲಿ ಕಳೆದ ದಿನಗಳ ಬೆಚ್ಚನೆ ನೆನಪು ನಮ್ಮಲ್ಲಿ ಮಾಸಿಲ್ಲ.

# ಕಾಲ ಚಕ್ರ ತಿರುಗುತ್ತಲೇ ಇದೆ

**ನೇಸರು**

2024 ಸಂಕ್ರಾಂತಿ ನಮ್ಮ ನಾಡಿಗೆ ಒಂದು ಹೊಸ ಯುಗವನ್ನೇ ತಂದಿದೆ. ರೂ.1000 ವರ್ಷಗಳಿಂದ ಹೊರಗಿನವರ ದಾಳಿಗೆ ಸಿಕ್ಕಿ, ನಮ್ಮ ಸಂಸ್ಕೃತಿ ಹೊಡೆತ ತಿಂದು ಮಲಗಿದ್ದಿದ್ದು ದಿಟ. ಆದರೆ ಹುಲ್ಲಿನ ಚಿಗುರಿನಂತೆ ಮಳೆಗಾಲ ಹೊಡೆತ ಸಿಕ್ಕಿಯು ಮತ್ತೆ ತಲೆಯೆತ್ತಿ ಚಿಗುರುತ್ತಿರುವುದನ್ನು ನಾವೆಲ್ಲರೂ ಇಂದು ನೋಡುತ್ತಿದ್ದೇವೆ. ಇದೇ ನಮ್ಮ ನಡೆವಳಿಕೆಯ ಬೇರು. ಇಸ್ಲಾಂನ ಧಾಳಿಯಿಂದ ಹಳೆಯಿಂದ ನಮ್ಮ ದೇವಾಲಯಗಳು ನಾಶವಾಗಿ ನಮ್ಮ ಮಂದಿಯನ್ನು ಮತಾಂತರಗೊಳಿಸಿದ್ದು ದಿಟ. ಆದರೆ ಬ್ರಿಟಿಷರ ನೂರು ವರ್ಷದ ಶಾಲೆಯ ವಿದ್ಯಾಭ್ಯಾಸ ನಮ್ಮ ಪೀಳಿಗೆಯನ್ನು ತಲೆಮಾಸಿ ಕೂರಿಸಿದೆ.

ನಮ್ಮಲ್ಲಿ ಶೈವರಿದ್ದಾರೆ ವೈಷ್ಣವವಿದ್ದಾರೆ ಜೈನರಿದ್ದಾರೆ ಬೌದ್ಧರಿದ್ದಾರೆ ಆದರೂ ಎಲ್ಲರೂ ತಮ್ಮ ತಮ್ಮ ಮತ ಭೇದಗಳನ್ನು ಮಾತಿನ ಮೂಲಕವಾಗಿಯೇ ನಡೆಸುತ್ತಿದ್ದರು. ಯಾರು ಕೈ ಎತ್ತಿ ಇನ್ನೊಬ್ಬರನ್ನು ಅಟ್ಟುತ್ತಿರಲಿಲ್ಲ. ಹೌದು ತಮ್ಮ ತಮ್ಮಲ್ಲಿಯೇ ಮದುವೆಗಳನ್ನು ಮಾಡಿಕೊಳ್ಳುತ್ತಿರಲಿಲ್ಲ 'ನಿನ್ನ ಮತ ನಿನ್ನದು ನನ್ನ ಮತ ನನ್ನದು' ಎಂದು ತೆಪ್ಪಗಿರುತ್ತಿದ್ದರು. ಯಾರೂ ಪ್ರವಾದಿಗಳು 'ದೇವರು ಈ ಕಟ್ಟಪ್ಪಣೆಯನ್ನು ನೀಡಿದ್ದಾನೆ ಯಾರಾದರೂ ಅದನ್ನು ಮುರಿದರೆ ಅವರ ಕೊರಳಿಗೆ ಕತ್ತಿ' ಎಂದು ಹೇಳುತ್ತಿರಲಿಲ್ಲ. ನಮ್ಮ ನಡೆವಳಿಕೆ ನಮ್ಮ ನಮ್ಮ ಅರಿವಿನ ಮೇರೆಗೆ ನಡೆಯುತ್ತಿತ್ತು. 'ನಾನು ಬಿಟ್ಟಿದ್ದು ನನಗೆ ಮುಳುವಾಗುತ್ತದೆ' ಅಂದರೆ 'ಮಾಡಿದ್ದುಣ್ಣೋ ಮಹಾರಾಯ' ಎಂದು ಕರ್ಮದ ಫಲವನ್ನು ಒಪ್ಪಿಕೊಳ್ಳುತ್ತಿದ್ದೇವೆ. ಯಾವ ದೇವರು ನಮಗೆ ವರವನ್ನು ನೀಡುವುದಿಲ್ಲ, ಯಾವ ಶಿಕ್ಷೆಯನ್ನು ನೀಡುವುದಿಲ್ಲ ಎಂಬ ಅರಿವಿನಿಂದ ನಮ್ಮ ನಾಡು ಮುಂದುವರರೆದಿದೆ.

"ನಾವು, ನಮ್ಮದು" ಎನ್ನುವ ಅರಿವು ಕಡಿಮೆಯಾದಾಗ ಹೊರಗಿನಿಂದ ಬಂದವರ ಜೊತೆಗೂಡಿ ನಮ್ಮವರನ್ನೇ ಹೊಡೆದು ಕಡಿದಾಗ ನಮ್ಮ ಸಂಸ್ಕೃತಿ ಮುಗ್ಗರಿಸಿತು. ಇದರಲ್ಲಿ ಹೆಚ್ಚಿನ ಹೊಣೆಗಾರಿಕೆ ರಾಜುಪೂತರರು. ಹೊರಗಿನಿಂದ ಬಂದವರ ಜೊತೆ ಹಣದಾಸೆ ಬಲದಾಸೆಗೆ ಬಲಿಯಾಗಿ ಕೂಡಿ ನಮ್ಮವರನ್ನೇ ಬಡಿದದ್ದು ದಿಟ. ಆದರೆ ನಮ್ಮಲ್ಲಿ ಹಲವರು ಮಹಾದೇವನ ಬರವನ್ನೇ ಕಾಯುತ್ತಿರುವ ಬಸವನಾಗಿ, ಶ್ರೀ ರಾಮನನ್ನೇ ಕಾಯುತ್ತಿರುವ ಹನುಮನಾಗಿ ನಿಂತಿದ್ದಕ್ಕೆಂದೆ ಇಂದು ಮತ್ತೆ ನಮ್ಮ ನಾಡು ತಲೆ ಎತ್ತಿ ನಿಂತಿದೆ. ಈಗ ನಾವು ಪ ಆಧಾರದಿಂದ ಇಲ್ಲಿ ಆ ದೇವಾಲಯವಿತ್ತು ಎನ್ನುವುದಕ್ಕಿಂತ, ನಮ್ಮದೆಯಲ್ಲಿ 'ಅವನು ಇರೋದು ದಿಟ, ಎಂದಾಗ ಮಾತ್ರ ನಮ್ಮ ನಾಡು ನಮ್ಮದೇ ನಾಡಾಗುತ್ತದೆ. ಯುರೋಪಿನಲ್ಲಿ ಪೋಪನದೆ ಆಡಳಿತವಾದಾಗ ಆಡಳಿತ ಧರ್ಮ ಎರಡು ಬೇರೆ ಬೇರೆ ಆಗಿರಬೇಕು ಯಾವುದೇ ಒಂದು ಧರ್ಮವನ್ನು ಬೆಂಬಲಿಸಬಾರದು. ಎಲ್ಲಾ ಧರ್ಮಗಳನ್ನು ಸಮವಾಗಿ ಕಾಣಬೇಕು ಎಂದಾಗ" ಎಂಬ ಪದವಾಯಿತು. ಇದು ನಮ್ಮ ನಾಡಿನಲ್ಲಿ ಮೊದಲಿನಿಂದ ನಡೆದು ಬಂದ ರೀತಿ. ನಾಸ್ತಿಕರು ಕೂಡ ನಮ್ಮಲ್ಲಿ ಸರಿಸಮನಾಗಿ ಬದುಕುತ್ತಿದ್ದರು. ಆದರೆ ಈಗ ಬೇರೆ ಒಂದು ಅರ್ಥವನ್ನು ನೀಡಿ ಕಡಿಮೆ ಸಂಖ್ಯೆಯಲ್ಲಿರುವ ಧರ್ಮಗಳಿಗೆ ಬೆಂಬಲ ನೀಡಬೇಕೆಂಬ ರೀತಿ ಸರಿಯಲ್ಲ. ಎಲ್ಲರೂ ಸರಿಸಮನಾಗಿ ಬದುಕಬೇಕು ಮಸೀದಿಗಳೂ ಇರಬೇಕು ಮಂದಿರಗಳೂ ಇರಬೇಕು. ಆದರೆ ಒಬ್ಬರು ಮತ್ತೊಬ್ಬರ ಆಸ್ತಿಯನ್ನು ಯಾವ ಕಾಲಕ್ಕೂ ಕಬಳಿಸುವಂತಿಲ್ಲ. 'ಇದಾಗಿ 600 ವರ್ಷವಾಯಿತು ಬಿಡಿ ಎನ್ನುವುದು ನಮ್ಮ ಸವಿಂಧಾನವಲ್ಲ.

ಮುನ್ನಡೆಯೋಣ ಆದರೆ ಜೊತೆಗೂಡಿ ನಡೆಯೋಣ ಯಾರು ಮುಂದಲ್ಲ ಯಾರು ಹಿಂದಲ್ಲ.

# ರಾಮ ಬಂದಾಯ್ತು ಅವನ ಹಿಂದೆ ರಾಮೇಶ್ವರನೂ ಬರುತ್ತಿದ್ದಾನೆಯೇ?

ನೇಸರು

2019ರಲ್ಲಿ 135 ವರ್ಷಗಳ ಹಿಂದಿನಿಂದಲೂ ನಡೆಯುತ್ತಿದ್ದ ರಾಮ ಜನ್ಮಭೂಮಿ ಬಾಬ್ರಿ ಮಸೀದಿಯ ಮೊಕದ್ದಮೆ ಮುಗಿದು ನಾಡಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ 2024 ಜನವರಿ 22ರಂದು ಆಯೋಧ್ಯೆಯಲ್ಲಿ ಬಾಲರಾಮನ ಸ್ಥಾಪನೆಯಾಯಿತು.

ಅದು ಮುಗಿದ ಮೂರನೆಯ ದಿನವೇ ಕಾಶಿಯಲ್ಲಿ ಕೋರ್ಟಿನ ಆದೇಶದ ಮೇರೆಗೆ ಜರುಗಿದ ಆರ್ಕಿಯಾಲೋಜಿಕಲ್ ಸರ್ವೆ ಆಫ್ ಇಂಡಿಯಾ ಸರ್ವೇಕ್ಷಣದ ವರದಿ ಬಂದು ಈ ಜ್ಞಾನವ್ಯಾಪಿಯ ಅಡಿಯಲ್ಲಿ. ಪುರಾತನ ಹಿಂದೂ ದೇವಾಲಯ ಇರುವುದಲ್ಲದೆ ಅದನ್ನು ಕಡವಿದ ಮೇಲೆ ಅದೇ ಕಂಬಗಳನ್ನು ಬಳಸಿ ಮಸೀದಿಯೊಂದನ್ನು ಕಟ್ಟಲಾಗಿದೆ ಎಂದು ಹೇಳಲಾಗಿದೆ. ಜ್ಞಾನದ ದೇವತೆಯಾದ ದಕ್ಷಿಣ ಮೂರ್ತಿ ತನ್ನ ಮೂರನೇಯ ಕಣ್ಣನ್ನು ತೆರೆಯುತ್ತಿರುವಂತೆ ತೋರುತ್ತಿದೆ.  ಕಾಶಿ ಪುರಾತನ ಕಾಲದಿಂದ ವಾರಣಾ ಮತ್ತು ಅಸಿ ನದಿಗಳು ಕೂಡುವಲ್ಲಿ ಇದ್ದ ಸ್ಮಶಾನ ಭೂಮಿ. ಎಲ್ಲಾ ಭಾರತವಾಸಿಗಳು ತಮ್ಮ ಸಂಸಾರ ಶ್ರಮವನ್ನು ಮುಗಿಸಿ ವಾಹನ ಪ್ರಸ್ತಾಶ್ರಮಕ್ಕೆ ಹೋಗುತ್ತಾ ಕಾಶಿಯಲ್ಲಿ ಗಂಗಾ ಸ್ನಾನ ಮಾಡಿ ವಿಶ್ವೇಶ್ವರನ ದರ್ಶನ ಮಾಡಿ ನಂತರ ಅಲ್ಲಿಯೇ ತಮ್ಮ ಅಸುವನ್ನು ನೀಗುತ್ತಿದ್ದರೂ ಎಂದು ಎಂಬ ವರದಿಗಳು ದೊರಕಿವೆ. ಕಾಮನನ್ನೇ ಕಿತ್ತು ಹಾಕಿದ ಮಹೇಶ್ವರ ಮತ್ತು ಮಾತಾ ಪಾರ್ವತಿ ನಮ್ಮ ನಾಡಿನ ಮೊದಲಿನ ದೇವರುಗಳು. ಪ್ರತಿ ವರ್ಷವೂ ಮೇಲಿರುತ್ತಿರುವ ಕೈಲಾಸ ಅದರ ಮೇಲೆ ದಕ್ಷಿಣ ಮೂರ್ತಿ ನಮ್ಮ ನಾಡಿನ ಮೇಲೆ ಕೂತಿರುವಾಗ ಪರ್ವತದ ಮಣ್ಣು ಸರಿದು ಪಾರ್ವತಿ ದೇವಿಯಾಗಿ ನಾಡಿನಲ್ಲೆಲ್ಲ ಹರಡಿ ನದಿಯಾಗಿ ಗಿಡಮರ ಪಕ್ಷಿಗಳಾಗಿ ಬನಶಂಕರಿಯಾಗಿದ್ದಾಳೆ.

ನಮ್ಮ ನಾಡಿನಲ್ಲಿ ಎರಡು ಜೀವಗಳು ಪುರಾತನವಾದವು ಒಂದು ಆನೆ, ಇನ್ನೊಂದು ನಂದಿ. ನಂದಿಯಂತೂ ಯಾವತ್ತೂ ಶಿವಲಿಂಗವನ್ನು ತನ್ನ ಹೆಗಲ ಮೇಲೆ ಹೊತ್ತು ತಿರುಗುತ್ತಿದೆ. ಆನೆ ಶಿವನ ಮಗುವಾಗಿ ಎಲ್ಲೆಡೆಯಲ್ಲಿಯೂ ತಿರುಗುತ್ತಿದೆ, ಈ ಶಿವನ ರೂಪಗಳೇ ನಮ್ಮ ನಾಡಿನಲ್ಲಿ ಎಲ್ಲೆಲ್ಲಿಯೂ ಜ್ಯೋತಿರ್ಲಿಂಗಗಳಾಗಿ ಹೊಳೆಯುತ್ತಿವೆ. ಯಾರೇ ಬಂದು ಕೆಡವಲಿ ಯಾರೇ ಬಂದು ಸುಡಲಿ ನಮ್ಮ ಶ್ರದ್ಧೆ ಮತ್ತೆ ಮತ್ತೆ ಎದ್ದು ಚಿಗುರುತ್ತದೆ ಎಂಬುದಕ್ಕೆ ಈ ಜ್ಞಾನವ್ಯಾಪ್ತಿಯೇ ಗುರುತು. ನಾವು ಆ ಶಿವಲಿಂಗವನ್ನು ಹೊತ್ತು ಮುನ್ನಡೆಯೋಣ, ನಡೆಯಿರಿ.

***********************************

## ಕೃಷ್ಣನಾ ಕೊಳಲಿನಾ ಕರೆ

ಕೃಷ್ಣ ಎಂದರೆ “ಕಪ್ಪು” ಎಂದು. ಎಂದರೆ ನಮ್ಮ ದೇವರುಗಳೆಲ್ಲ ಕಪ್ಪು ಬಣ್ಣದವರೇ? ಇರಬಹುದು. ಇಲ್ಲಿ ಇದ್ದ ಕಾಡಿನವರು, ದ್ರಾವಿಡರು ಎಲ್ಲರೂ ಕಪ್ಪು ಬಣ್ಣದವರೇ. ಆದ್ದರಿಂದ ಅವರು ತಮ್ಮ ದೇವರುಗಳನ್ನು ಅದೇ ಬಣ್ಣದಲ್ಲಿ ಕಂಡಿದ್ದರೆ ಏನು ಸೋಜಿಗವಿಲ್ಲ. ಕರಿಮಾರಿಯಮ್ಮ, ಕಾಳಿ ಕೂಡ ಕಪ್ಪು ಬಣ್ಣದ ತಾಯಿ ದೇವರುಗಳು.

ಹೀಗಾಗಿ ಬೃಂದಾವನದಲ್ಲಿದ್ದ ತುಂಟ ಹುಡುಗ ದೇವಕಿಯ ಮಗ ಕೂಡ ಕಪ್ಪು ಬಣ್ಣದವನೇ ಆಗಿದ್ದಿರಬಹುದು. ಏನಿದ್ದರೂ ಅವನು ನುಡಿಸುತ್ತಿದ್ದ ಆ ಬಿದರಿನ ಕೊಳಲಿನ ದನಿ ಎಲ್ಲರ ಮನ ಗೆದ್ದಿತ್ತು. ಬೃಂದಾವನದಿಂದ ಮದ್ದೂರಿಗೆ ಹೋದ ಕೃಷ್ಣ ಮರಳಿ ಗೋಕುಲಕ್ಕೆ ಬರಲೇ ಇಲ್ಲ ಎಂದು ಹೇಳುತ್ತದೆ ಮಹಾಭಾರತ. ಆದರೆ ಮಹಾಭಾರತ ಇನ್ನೂ ಮುಗಿದೇ ಇಲ್ಲ, ನಡೆಯುತ್ತಲೇ ಇದೆ. ಆಗ ಕುರುಕ್ಷೇತ್ರದ ಯುದ್ಧಕ್ಕಾಗಿ ದುರ್ಯೋಧನ ಇತ್ತ ಕರೆಯನ್ನು ಕೇಳಿ ಗಾಂಧಾರದ ಆಚೆಯಿಂದ ಇನ್ನೂ ದಾಳಿಗಳು ನಡೆಯುತ್ತಲೇ ಇವೆ. ಹಸ್ತಿನಾವತಿ, ಇಂದ್ರಪ್ರಸ್ಥಗಳನ್ನು ಪಾಂಡವರು ಕೈಗೆ ತೆಗೆದುಕೊಂಡು ಶಕುನಿ ಮತ್ತು ಸೈಂಧವರ ಮಕ್ಕಳು ಪಾಕಿಸ್ತಾನವನ್ನು ಮಾಡಿಕೊಂಡು ಅಲ್ಲಿಂದ ದಾಳಿ ಮಾಡುತ್ತಲೇ ಇದ್ದಾರೆ. ಸರಸ್ವತಿ ನದಿ ಇಂಗಿ ದ್ವಾರಕಾ ಮುಳುಗಿ ಕೃಷ್ಣ ಮತ್ತೆ ಮಥುರೆಗೆ ಬಂದಿದ್ದಾನೆ ಎಂದು ಸುದ್ದಿ. ಹಾಗಿದ್ದರೆ ಅವನ ಕೊಳಲಿನ ದನಿ ಏಕೆ ಕೇಳಿ ಬರುತ್ತಿಲ್ಲ? ತಾಳ್ಮೆ, ತಾಳ್ಮೆ. ಗೋಪಿಯವರಂತೆ ನಮಗೆ ತಾಳ್ಮೆ ಬೇಕು ಪುತಿನ ಅವರು ತಮ್ಮ ಗೋಕುಲ ನಿರ್ಗಮನದಲ್ಲಿ ಹೇಳಿರುವಂತೆ..

"ಇದ್ದುದೂ  ದಿಟ
ಅವನೊಲಿದುದೂ ದಿಟ
ನಾವು ನಲಿದುದೂ ದಿಟ
ಬಹ ನೆಚ್ಚೂ ದಿಟ ಎಂದು
ಗಾಳಿಯು ಸಿರಿ ಎಮ್ಮೆದೆಗೆಚ್ಚರ
ತರುತ್ತಿರು ಕೊಳಲೆ, ಕೊಳಲೆ, ಕೊಳಲೆ"..

ಹೀಗೆ ಬಂದೇ ಬರುತ್ತಾನೆ ಮತ್ತೆ ಕೊಳಲಿನ ದನಿ ಕೇಳಿ ಕೇಳುತ್ತದೆ. ನಾವು ಮತ್ತೆ ಕುಣಿಯುತ್ತೇವೆ ಎಂಬ ಕೆಚ್ಚೆದೆಯಿಂದ ಮುಂದುವರಿಯೋಣ. ಮಥುರೆಯಿಂದ ಮಧುರ ಧ್ವನಿ ಕೇಳೇ ಕೇಳುತ್ತದೆ.

ಕಥೆ

# ಇಳಿಹೊತ್ತು

✍ **ರಾಘವೇಂದ್ರ ನಾಯ್ಕ್**

ನಡುವೆ-ನವಂಬರ್ ೨೮,೨೦೦೯

ಬೆಳಿಗ್ಗೆ ಚುಮು ಚುಮು ಚಳಿಯಲ್ಲಿ ಸೂರ್ಯ ಎಷ್ಟೊತ್ತಿಗೆ ಮುಸುಕು ತೆಗೆದು ಎದ್ದಿದ್ದನೋ ಗೊತ್ತಿಲ್ಲ.ಪರಂಧಮಯ್ಯನವರು ಆಶ್ಚರ್ಯಧಾಮ ವೃದ್ಧಾಶ್ರಮದ ಲಾನ್ ನಡುವೆ ಖುರ್ಚಿಯಲ್ಲಿ ತಲೆ ಒರಗಿಸಿ ಕುಂತಿದ್ದರು. ಆಗಾಗ ನಿಟ್ಟುಸಿರು ಬಿಡುತ್ತಾ, ವೃದ್ಧಾಶ್ರಮದ ಕಡೆ ದೃಷ್ಟಿ ಹಾಯಿಸಿದಾಗೆಲ್ಲ ಮನಸು ಮರಗುತ್ತಿತ್ತು. ತನ್ನ ಮನೆಯಂತೆ ತಿಳಿದ್ದಿದ್ದರು. ಮಲತಾಯಿಯಂತೆ ಆಚೆಗೆ ನೂಕುತ್ತಿತ್ತಷ್ಟೇ.

ಬೆಳ್ಳಿಗ್ಗೆ ಕಾಫೀ ಬೇಡವೆಂದ್ದಿದ್ದರು.ಚಳಿಯಿದ್ದರೂ ಶಾಲು ಹೊದ್ದಿರಲಿಲ್ಲ.ಬಿಸಿಯುಸಿರು ಚೆಲ್ಲುತ್ತಾ ತಂಗಾಳಿ ಸೇವಿಸುತ್ತಿದ್ದರು.ಒಂಥರಾ ವಿಪ್ಲವ ಮನಸ್ಥಿತಿ. ನಿರ್ಲಿಪ್ತತೆ ಕಾಡುತಿತ್ತು. ಮನಸು ತುಡಿಯುತ್ತಿತ್ತು.ಆದರೂ ಮಾತು ಹೊರಬರದು.ವಯಸ್ಸು ೬೨. ನೀಟಾಗಿ ಶೇವ್ ಮಾಡಿ, ಕ್ರಾಪ್ ಬಾಚಿ, ಆಗ ತಾನೇ ಸ್ನಾನ ಮಾಡಿ ರೇಷ್ಮೆ ಕುರ್ತಾ ಪೈಜಾಮನಲ್ಲಿ ಸುವಾಸನೆ ಸುತ್ತಲಿನ ಹೂಗಿಡಗಳಿಗೆಲ್ಲ ಬೀರುತ್ತಿದ್ದರು. ಅವು ನಾಚಿ ಸುಮ್ಮನೇ ಆಸ್ವಾದಿಸುತ್ತಿದ್ದವು.ಕೈಗಳ ತಲೆಗೆ ಆದರಿಸಿ ಕುಂತಿದಷ್ಟೇ, ಹೇಳುವ ಮಾತುಗಳು ಗಂಟಲಲ್ಲೇ ಅಡಗಿಸಿಕೊಂಡು ಕುಳಿತ್ತಿದ್ದರು. ಕಣ್ಣು ಮಾತ್ರ ಪ್ರೀತಿ ಹುಡುಕುತ್ತಿತ್ತು.

ಹಿಂದೆ-

ಫೆಬ್ರವರಿ ೨೬,೨೦೦೧

ಪರಂಧಾಮಯ್ಯ ಆದಾಯ ತೆರಿಗೆ ಅಧಿಕಾರಿ. ಬಡತನವನ್ನೆ ಹಾಸಿ, ಹೊದ್ದು ಹುಟ್ಟಿದವರು. ಮದುವೆ ದಿನವಾದ್ದರಿಂದ ಲಕ ಲಕ ಹೊಳೆಯುತ್ತಿದ್ದ. ಜೊತೆಗೆ ತಾನು ಕೇಂದ್ರ ಸರ್ಕಾರಿ ನೌಕರನೆಂಬ ಛಾಪು ಎದ್ದು ಕಾಣುತ್ತಿತ್ತು. ಸುಕನ್ಯಾ ಅಂದು ಬದಿಯಲ್ಲಿ ಕೂರುತ್ತಾಳೆ. ಅವಳಿಗೆ ಹಾರ ಹಾಕಿ, ತಾಳಿ ಕಟ್ಟಿ, ಪೂರೋಹಿತರು ಹೇಳಿದ ಶಾಸ್ತ್ರ ಮುಗಿಸಿದರೆ ಆಯ್ತು, ಜೀವನದ ಮತ್ತೊಂದು ಅಧ್ಯಾಯ ತೆರೆಯುತ್ತದೆ. ಹೇಗೋ ಮದುವೆ ಮುಗಿಯಿತು.

ಪರಂಧಾಮಯ್ಯ ಈಗ ಸುಕನ್ಯಾಳ ಗಂಡ. ಅವರದ್ದೆ ಒಂದು ಪುಟ್ಟ ಪ್ರಪಂಚ. ಮೂರು ವರ್ಷದಲ್ಲಿ ಎರಡು ಬಾರಿ ಗರ್ಭಪಾತವ್ರೂ ಆಯ್ತು. ಇಬ್ಬರಿಗೂ ದಿಗಿಲು. ಮೂರನೇ ಬಾರಿ ಗರ್ಭ ಕಟ್ಟಿದಾಗ ಮತ್ತೇ ಮಗು ಬೇಡ. ಇದೊಂದು' ಚಿಗುರು ಉಳಿದರೇ ಸಾಕು. ಉಳಿಸಿಕೊಡು ಎಂದು ಬೇಡಿದಷ್ಟೇ ಕಂಡ ಕಂಡ ದೇವರಿಗೆಲ್ಲ, ಹರಕೆ ಕಟ್ಟಿದ್ದು ಆಯ್ತು. ಈ ಬಾರಿ ದೇವರು ಹರಸಿದ್ದ. ಬಾಣಂತನಕ್ಕೆ ತವರಿಗೆ ಹೋಗಿದ್ದಾಗ ಇಬ್ಬರಿಗೂ ಸಮಯವೇ ಕಳೆಯುತ್ತಿರಲ್ಲಿಲ್ಲ. ಮಳೆಗಾಲ ಪ್ರಕೃತಿ ಮೈ ತುಂಬುತ್ತಿದ್ದಂತೆ, ಸುಕನ್ಯಾಳಿಗೆ ಹೆರಿಗೆ ಆಯ್ತು. ಪರಂಧಾಮಯ್ಯನ ಖುಷಿಗೆ ಪಾರವೇ ಇರಲಿಲ್ಲ.ಸುಕನ್ಯಾ ಮತ್ತೆ ಮಗುವನ್ನಾ ನೋಡೋ ತವಕದಿಂದ ಓಡಿಬಂದ ಪರಂಧಾಮಯ್ಯ ಸುಕನ್ಯಾ ಬಳಿ ಈಗ ಹೇಗಿದ್ದಿ? ಎಂದಾಗ, ಸುಕನ್ಯಾ ಸನ್ನೆಯಲ್ಲೇ ಉತ್ತರಿಸಿ ಮಗುವಿನ ಕಡೆ ನೋಟ ಬೀರಿದಳು. ಅವಳು ಹೆಣ್ಣುಮಗುವಾದ್ದರಿಂದ, ಆನಂದಕ್ಕೆ ಪಾರವೇ ಇರಲಿಲ್ಲ. ಪರಂಧಾಮಯ್ಯ "ಸುಕನ್ಯಾ ಏನು ಚಿಂತಿಸಬೇಡ. ಹೆಣ್ಣಿರಲಿ, ಗಂಡಿರಲಿ ಇದು ನಮ್ಮದು'ಎಂದು ಮುದ್ದಾಡಿದರು. ಸುಕನ್ಯಾ 'ನಿಜ ಅಂತೂ ನನ್ನ ಪ್ರಾರ್ಥನೆ ಫಲಿಸಿತು. ನಿಮ್ಮಂತಹ ಪತಿ ಸಿಕ್ಕ ನಾನು ಧನ್ಯ' ಎಂದು ನಿಟ್ಟುಸಿರು ಬಿಟ್ಟಳು.

ಸಂಸಾರದ ಸುಖದಲ್ಲಿ ಕಾಲ ಸರಿದಿದ್ದು ಗೊತ್ತಾಗಲೇ ಇಲ್ಲ. ಮಗಳು ಬೆಳೆದಂತೆಲ್ಲಾ ಪರಂಧಾಮಯ್ಯನವರಲ್ಲಿ ಭವಿಷ್ಯದ ತಳಮಳ ಶುರುವಾಗಿತ್ತು.ಮಗಳ ಮದುವೆ ಮಾಡಿದರೇ ಮುಂದೇನು? ಎಂಬ ಪ್ರಶ್ನೆ ಕಾಡತೊಡಗಿತು. 'ಏನು ಆಗಲ್ಲ, ಇವಳೇನು ನಮ್ಮ ಕೈ ಬಿಡಲ್ಲ, ಯಾಕೆ ಚಿಂತೆ ಮಾಡತೀರಾ' ಎನ್ನೋ ಸುಕನ್ಯಾಳ ಮಾತುಗಳಲ್ಲಿ ಪರಂಧಾಮಯ್ಯನವರಿಗೆ ಸಮಾಧಾನವಿರಲಿಲ್ಲ. ಪರಂಧಾಮಯ್ಯ ಪದೇ ಪದೇ ನಿದ್ದೆಗಣ್ಣಲ್ಲಿಯೂ ಯೋಚಿಸುತ್ತಿದ್ದರು. ಕಡೆಗೂ ಒಂದು ತೀರ್ಮಾನಕ್ಕೆ ಬಂದರು. ಸಮೀಪದಲ್ಲಿದ್ದ ಆಶ್ರಮಧಾಮ ಒಂದು ಪರಿಹಾರದಂತೆ ಕಂಡಿತು.ಅಲ್ಲಿನ ವಯೋವೃದ್ದರ ಬೇಕು ಬೇಡಿಕೆಗಳನ್ನು ಕೇಳಿ ವಸ್ತುರೂಪದಲ್ಲಿ ಪೂರೈಸತೊಡಗಿದರು.ವೃದ್ಧಾಶ್ರಮದ ಮಾಲೀಕನಾದ ಶ್ರೀಕರನಿಗೆ ಪರಂಧಾಮಯ್ಯ ಬತ್ತದ ಒರತೆಯಾಗಿ ಕಂಡರು. ಮಗಳು ಬೆಳೆಯುತ್ತಿದ್ದಂತೆ, ಆಶ್ರಮಧಾಮದ ವ್ಯೋಹ ಬೆಳೆಯುತ್ತಿತ್ತು. ನಿವೃತ್ತಿ ನಂತರ ತಾನು ಸುಕನ್ಯಾ ಜೊತೆ ಅಲ್ಲಿಯೇ ಇರುವುದೆಂದು ನಿಶ್ಚಯಿಸಿದ್ದರು. ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡಿ ಮುಗಿಸಿದರು. ಮಾನವನ

ಏಣಿಕೆ ಒಂದಾದರೇ ವಿಧಿಯ ಲೆಕ್ಕಾಚಾರವೇ ಇನ್ನೊಂದಾಗಿರುತ್ತದೆ. ಮಗಳ ಮದುವೆ ಮಾಡಿದ ಸಂಭ್ರಮದಲ್ಲಿರುವಾಗಲೇ ಒಂದು ರಾತ್ರಿ ಸುಕನ್ಯಾ ಹೃದಯಾಘಾತದಿಂದ ದೀರ್ಘ ನಿದ್ದೆಗೆ ಜಾರಿಯಾಗಿತ್ತು. ಅಂದಿನಿಂದ ಪರಂಧಾಮಯ್ಯ ಅಕ್ಷರಶಃ ಒಂಟಿಯಾದರು. ಕೆಲ ದಿನಗಳಲ್ಲಿ ವೃತ್ತಿಗೂ ರಾಜೀನಾಮೆ ಇತ್ತರು.

ಮಗಳು ಅಳಿಯ ತಮ್ಮೊಟ್ಟಿಗೆ ಬರುವಂತೆ ಕಾಲಿಗೆ ಬಿದ್ದು ಬೇಡಿದರೂ, ಪ್ರಯೋಜನವಾಗಲಿಲ್ಲ. ಪರಂಧಾಮಯ್ಯ ತೀರಾ ಸ್ವಾಭಿಮಾನದ ವ್ಯಕ್ತಿ, ಯಾರ ಹಂಗೂ ಬೇಕಿರಲಿಲ್ಲ.'ನೀವು ಚೆನ್ನಾಗಿರಿ, ನಾನು ಆಗಾಗ ಬಂದು ಹೋಗುತ್ತಿರುತ್ತೇನೆ.

ಮೊಮ್ಮಕ್ಕಳ ನೋಡುವಾಸೆ' ಎಂದರು. 'ನೀವೂ ಬನ್ನಿ ಪಪ್ಪಾ' ಎಂಬ ಮಾತು ಸಹ ಪರಂಧಾಮಯ್ಯನವರಿಗೆ ಆತ್ಮೀಯವಾಗಿ ಕೇಳಲಿಲ್ಲ. ಆಗಲೇ ಎಲ್ಲಾ ಮೋಹ ಕಳಚಿ ವೃದ್ಧಾಶ್ರಮ ಕೈ ಬೀಸಿ ಕರೆಯುತ್ತಿತ್ತು. ಅಂತೂ ಹೋಗಿ ಸೇರಿ ಬಿಟ್ಟರು.ಆದರೆ ವಾರಗಳು ಕಳೆದಂತೆ ಅಲ್ಲಿಯ ಊಟ, ತಿಂಡಿ, ಅವರ ಉಪಚಾರ ರುಚಿಸುತ್ತಿರಲಿಲ್ಲ. ಹಣ ನೀಡುವುದಷ್ಟೇ ಇವರೇನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಊಟದ ಆಸೆಗೆ ಬಿದ್ದಂತಿದೆ ಎಂದು ಯಾರಿಗೂ ಕೇಳದಂತೆ ಗೊಣಗುತ್ತಿದ್ದರು.ತಮ್ಮ ಸ್ವಾಭಿಮಾನ ಜೀವನದ ತೀರ್ಮಾನಕ್ಕೆ ಹಳಹಳಿಸುತ್ತಿದ್ದರು. ಮತ್ಯಾವ ದಿಕ್ಕು ಕಾಣದೇ ಕೈ ಚೆಲ್ಲಿ ದಿನದಿಂದ ದಿನಕ್ಕೆ ಚಿಂತಿತರಾದರು.

ಮುಂದೆ-ನವೆಂಬರ ೨೯,೨೦೩೪

ವೃದ್ಧಾಶ್ರಮದ ಕೊಠಡಿ ಸಂಖ್ಯೆ ೨೧ರ ಬಾಗಿಲು ಬಡಿಯಿತು.ಮಂಚದ ಮೇಲೆ ಒರಗಿದ್ದ ಪರಂಧಾಮಯ್ಯ ಎದ್ದು ಬಾಗಿಲು ತೆರೆದರು. ವೃದ್ಧಾಶ್ರಮದ ಪರಿಚಾರಕರು 'ಸರ್ ಕೂಡಲೇ ಆಫೀಸ್ ರೂಮಿಗೆ ಬರಬೇಕಂತೆ' ಕೂಡಲೇ ಮುಖ ತೊಳೆದು ಗಡಿಬಿಡಿಯಲ್ಲಿ ಹೊರಟರು.ಮನದಲ್ಲೇನೋ ಕೌತುಕ, ಯಾರಿರಬಹುದು? ಯಾಕೆ ಬಂದಾರು? ಯೋಚಿಸುತ್ತಲೇ ಅತ್ತ ನಡೆದರು.ಅಲ್ಲಿ ಆಫೀಸ್ ಮ್ಯಾನೇಜರ್ ಇರಲಿಲ್ಲ. ಒಂದು ದಂಪತಿ ಕುಳಿತ್ತಿದ್ದರು. ಪರಂಧಾಮಯ್ಯ ಬರುತ್ತಿದ್ದಂತೆ ಅವರೇ ಎದ್ದು ನಮಸ್ಕರಿಸಿ, 'ನಾನು ವಿಕ್ರಾಂತ, ಇವಳು ನನ್ನ ಮಿಸೆಸ್ ಶಾಲಿನಿ. ನಾನು ಸಾಫ್ಟವೇರ್ ಇಂಜನಿಯರ' ಎಂದು ಪರಿಚಯಿಸಿಕೊಂಡರು. ನನ್ನಿಂದೇನಾಗಬೇಕು ಎಂದು ಪರಂಧಾಮಯ್ಯನವರು ಕನ್ನಡಕ ಸರಿಪಡಿಸಿಕೊಳ್ಳುತ್ತ ಕೇಳಿದರು. 'ಸರ್ ನಾನು ಅನಾಥ, ಚೆನ್ನಾಗಿ ಓದಿ ಕೆಲಸಕ್ಕೆ ಸೇರಿದೆ. ನಂತರ ಇವಳು ಜೊತೆಯಾದಳು. ಇಬ್ಬರೂ ಜೀವನ ಆರಂಭಿಸಿ ವರ್ಷವಾಯ್ತು.'

ಹಾಂ, ಅದಕ್ಕೇನೀಗ ಒಳ್ಳೆಯದು, ಚೆನ್ನಾಗಿದ್ದಿರಲ್ವೇ? ಆಗ ಶಾಲಿನಿ 'ಸರ್ ಇವರು ದುಡಿಯುತ್ತಾರೆ. ಕೈ ತುಂಬಾ ಸಂಬಳ ಬರುತ್ತದೆ. ನಾನು ಅನಾಥೆ, ಇಷ್ಟಪಟ್ಟು ಮದುವೆಯಾದ್ರು. ನಮಗೆ ತಂದೆ ತಾಯಿ ಗೊತ್ತಿಲ್ಲ. ಹಿರಿಯರ ಒಡನಾಟ ಅನುಭವಿಸಿಲ್ಲ. ಅದಕ್ಕೆ ಒಂದು ತಿಂಗಳಿಂದ ತೀರ್ಮಾನ ಮಾಡಿದ್ವಿ.ಎಲ್ಲ ವೃದ್ಧಾಶ್ರಮ ಹುಡುಕಿದ್ವಿ. ಎಲ್ಲರೂ ತಂದೆ ತಾಯಿ ಇಬ್ಬರನ್ನೂ ತಂದು ಬಿಟ್ಟವರೇ, ಯಾರು ಒಂಟಿಯಲ್ಲ. ನೀವು ಒಂಟಿಯೆಂದು ತಿಳಿದುಕೊಂಡೆವು'.

'ಅದಕ್ಕೆನೀಗ? ನಿಮ್ಮ ಉದ್ದೇಶವೇನು?' ಎಂದು ಪರಂಧಾಮಯ್ಯ ಕೇಳಿದರು.

ತಟ್ಟನೆ 'ನಿಮ್ಮನ್ನು ನಮ್ಮ ದತ್ತು ತಂದೆಯಾಗಿ ಪಡೆಯಬೇಕೆಂದಿರುವೆ' ಎಂದ ವಿಕ್ರಾಂತ.


'ಯಾಕೆ ನನ್ನ ಬಳಿಯೇ ಬಂದಿದ್ದು? ಯಾರು ಒಪ್ಪಲಿಲ್ಲವೇ?'ಪರಂಧಾಮಯ್ಯ ಕೇಳಿದರು.

'ಎಲ್ಲರನ್ನು ಮಕ್ಕಳೇ ಬಿಟ್ಟವರಂತೆ, ಇವರಿಗೆ ಮತ್ತೆ ಮಕ್ಕಳೇ ಬಂದು ಕರೆದೊಯ್ಯಬಹುದೆಂಬ ದೂರದ ನಿರೀಕ್ಷೆ, ಯಾರು ಬರಲು ಒಪ್ಪುತ್ತಿಲ್ಲ. ನೀವು ಮಾತ್ರಾ ಒಂಟಿಯಾಗಿ ಇಲ್ಲಿ ಬಂದು ಸೇರಿದ್ದು ಎಂದು ತಿಳಿಯಿತು. ನೀವಾದರೂ ನಮ್ಮ ಜೊತೆ ಬರಬಹುದೆಂಬ ಆಸೆ. ದಯವಿಟ್ಟು ನಿರಾಸೆ ಮಾಡಬೇಡಿ' ಎಂದ ವಿಕ್ರಾಂತ.

ಪರಂಧಾಮಯ್ಯನವರ ಮಾತು ಗಂಟಲಲ್ಲೇ ಉಳಿದವು. ಏನೂ ಹೇಳಲು ತೋಚದೆ ತಡವರಿಸಿದರು. ಕಣ್ಣು ಮಾತ್ರ ಮಿನುಗುತ್ತಿದ್ದವು. ಹೇಳಲಸಾಧ್ಯವಾಗಿ ಏಳಲು ಪ್ರಯತ್ನಿಸಿದರು. ವಿಕ್ರಾಂತ ತಾನೇ ಎದ್ದು ಕೈ ಹಿಡಿದು ಹೆಗಲ ಚಾಚಿ ಅವರನ್ನ ಖುರ್ಚಿಯಿಂದ ಎಬ್ಬಿಸಿದ. ಪರಂಧಾಮಯ್ಯ ನಿಟ್ಟುಸಿರ ಚೆಲ್ಲಿ ಅವರ ಹೆಗಲಿನಾಸರೆ ಪಡೆದು ಹೊರಟರು.

## ಕರ್ನಾಟಕ ಶಾಸ್ತ್ರೀಯ ಸಂಗೀತ - ವಿದೂಷಿ ಧನ್ಯಾ ದಿನೇಶ್ ರುದ್ರಪಟ್ಟಣ

ಧನ್ಯಾ ದಿನೇಶ್ ಅವರ ಮೂಲ ರುದ್ರಪಟ್ಟಣ. ಈಗ ಚೆನ್ನೈ ವಾಸಿ. ಇವರು ತಮ್ಮ ಸಂಗೀತ ಕಲಿಕೆಯನ್ನು ಅತ್ಯಂತ ಚಿಕ್ಕ ವಯಸ್ಸಿಗೆ ಶುರು ಮಾಡಿರುತ್ತಾರೆ. ಇವರು ಈಗ ಸಧ್ಯಕ್ಕೆ ವಿದ್ವಾನ್ ಡೆಲ್ಲಿ ಪಿ. ಸುಂದರರಾಜನ್ ಅವರ ಹತ್ತಿರ ಉನ್ನತ ಮಟ್ಟದ ಸಂಗೀತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇವರು All India Radio ದ "A" grade ಆರ್ಟಿಸ್ಟ್ ಕೂಡಾ.




ಮೈಸೂರು ಅಸೋಸಿಯೇಷನ್ ನಲ್ಲಿ ದಿನಾಂಕ 14.01.2024 ರ ಸಂಜೆ ನಡೆದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಇವರೊಂದಿಗೆ ವಿದ್ವಾನ್ ಶ್ರೀ ಎಸ್ ವಿ ರಾಮಚಂದ್ರನ್ ಅವರು ವಯೋಲಿನ್ ನಲ್ಲಿ ಮತ್ತು ವಿದ್ವಾನ್ ಶ್ರೀ. ರೋಹಿತ್ ಪ್ರಸಾದ್ ಮೃದಂಗದಲ್ಲಿ ಸಹಕಾರ ನೀಡಿದರು.

ಅಂದು ಇವರು ನಮ್ಮ ಕನ್ನಡ ವಾಗ್ಗೇಯಕಾರರ ರಚನೆಗಳನ್ನು ಹೆಚ್ಚಾಗಿ ಹಾಡಿ ಶ್ರೋತೃರನ್ನು ರಂಜಿಸಿದರು. ಅವರ ರಾಗ ಮಾಧುರ್ಯ, ಹಾಡುವ ಶೈಲಿ, ಅವರ ಭಾವ ಪೂರ್ಣ ಅಭಿವ್ಯಕ್ತಿ ಅತ್ಯಂತ ಆಕರ್ಷಕವಾಗಿತ್ತು. ಅವರಿಗೆ ಮುಂದೆ ಒಳ್ಳೆಯ ಭವಿಷ್ಯವಿದೆ.

*************

# ಬೌದ್ಧಾವತಾರ ಯಾವುದು?

ಮಹಾ ವಿಷ್ಣುವಿನ ಹತ್ತು ಅವತಾರಗಳು ಯಾವುವೆಂದು ನಿಮಗೆಲ್ಲ ತಿಳಿದಿದೆ. ಅವುಗಳಲ್ಲಿ 9ನೇ ಅವತಾರವಾದ ಬೌದ್ಧಾವತಾರದ ಬಗ್ಗೆ ಬಹುತೇಕರಿಗೆ ತಿಳಿದಿಲ್ಲ. ಬೌದ್ಧಾವತಾರವೆಂದರೆ ಗೌತಮ ಬುದ್ಧ ಎಂದು ಬಹುತೇಕರು ತಿಳಿದಿದ್ದಾರೆ. ಆದರೆ ಅದು ನಿಜವಲ್ಲ. ಬೌದ್ಧ ಎಂದರೆ ವಿವಸ್ತ್ರ ಅಥವಾ ವಸ್ತ್ರಹೀನ. ಈ ಅವತಾರದಲ್ಲಿ ಭಗವಂತನ ವಿವಸ್ತ್ರವಾಗಿ ಅವತರಿಸಿದ್ದಾನೆ.



ಬಲಿಷ್ಠ ಅಸುರನೋರ್ವ ಬ್ರಹ್ಮನಿಂದ ವರ ಪಡೆದು ಮೂರು ಲೋಕಗಳ ಮೇಲೆ ಆಕ್ರಮಣ ಮಾಡಲಾರಂಭಿಸುತ್ತಾನೆ. ಆಗ ದೇವತೆಗಳು ಮತ್ತು ದಾನವರ ನಡುವೆ ಯುದ್ಧ ನಡೆಯುತ್ತದೆ. ಇನ್ನೇನು ಆತನ ಪುಣ್ಯಾಂಶ ಮುಗಿದು ಆತನು ಸೋಲಬೇಕು ಎನ್ನುವಷ್ಟರಲ್ಲಿ ಆತನ ಸತಿಯ ಪ್ರತಿವೃತ ಪರಿಪಾಲನೆ ಮತ್ತು ಅಪಾರ ದೈವ ಭಕ್ತಿಯಿಂದ ಅವನ ಪುಣ್ಯಾಂಶ ಹೆಚ್ಚಾಗುತ್ತಿರುತ್ತದೆ.

ಹೀಗಿರುವಾಗ ದೇವಾನುದೇವತೆಗಳು ವಿಷ್ಣುವಿನ ಮೊರೆ ಹೋಗುತ್ತಾರೆ. ಆಗ ವಿಷ್ಣು ಅತಿ ಸುಂದರವಾದ ತರುಣನ ವೇಷದಲ್ಲಿ ವಿವಸ್ತ್ರದಿಂದ ಆಕೆಯ ಮುಂದೆ ಬಂದು ನಿಲ್ಲುತ್ತಾನೆ. ಆತನ ಅತಿ ಸುಂದರವಾದ ರೂಪವನ್ನು ನೋಡಿ ಒಂದು ಕ್ಷಣ ಆಕೆಯ ಮನಸ್ಸು ಚಂಚಲಗೊಳ್ಳುತ್ತದೆ.

ಸರಿಯಾಗಿ ಅದೇ ಸಮಯಕ್ಕೆ ಪರಶಿವನು ಅಸುರನನ್ನು ಸಂಹರಿಸುತ್ತಾನೆ. ಅದೇ ಬೌದ್ಧಾವತಾರ. ಹಾಗಾದರೆ ಈ ಅವತಾರದ ಆಧಾರನೆ ಇಲ್ಲವೇಕೆ? ಅದಕ್ಕೆ ಇಲ್ಲಿದೆ ಉತ್ತರ. ಅವತಾರ ಬೇರೆ ಯಾವುದೂ ಅಲ್ಲ. ಅದುವೇ ಪಾಂಡುರಂಗ ಅಥವಾ ವಿಠ್ಠಲನ ಅವತಾರ. ಹೌದು ಪಾಂಡುರಂಗನ ಮೂಲ ವಿಗ್ರಹ ಬೌದ್ಧಾವತಾರದಲ್ಲೇ ಇದೆ. ಇದು ಮಹಾರಾಷ್ಟ್ರದ ಕುರುಡುವಾಡಿ ಹತ್ತಿರವಿರುವ ಮಾಢಾ ಎಂಬ ಪುಟ್ಟ ಗ್ರಾಮದಲ್ಲಿದೆ. ಇದು ಬೌದ್ಧಾವತಾರದಲ್ಲೇ ಇದೆ. ಮುಸ್ಲಿಮರ ಅಕ್ರಮಣದಿಂದ ರಕ್ಷಿಸಲು ಯಾರಿಗೂ ತಿಳಿಯದೆ ರಾತ್ರಿ ವೇಳೆಯಲ್ಲಿ ಜೋಳದ ಚೀಲದಲ್ಲಿ ಆ ಮೂಲ ವಿಗ್ರಹವನ್ನು ಪಂಢರಾಪುರದಿಂದ ಮಾಢಾಗೆ ಸ್ಥಳಾಂತರಿಸಲಾಯಿತು. ಇದೇ ಕಾರಣಕ್ಕೆ ಇಂದಿಗೂ ಅಲ್ಲಿ ಗರ್ಭಗುಡಿಯ ಚೌಕಟ್ಟಿಗೆ ಜೋಳದ ತೆನೆಗಳನ್ನು ಕಟ್ಟುತ್ತಾರೆ. ರಾಜಾ ರಾಮ ಮಹಾರಾಜರ ಅಭಂಗದಲ್ಲಿ ಹೇಳಿದ್ದಾರೆ.

ಪಂಢರಿರಾಯಾ ಸ್ವಾಮಿ ಪಾಂಡುರಂಗ| ಉದ್ಧರಿಲೆ ಜಗಾ ಭೇಟಿಹೋತಾ||
ಬೌದ್ಧಅವತಾರ ವಿಠೇವರಿ ಉಭಾ | ವೈಕುಂಠಿಚಾ ಶೋಭಾ ಪಾಂಡುರಂಗ ||

ಹೀಗಿದ್ದರೂ ಬೌದ್ಧವತಾರ ಗೌತಮ ಬುದ್ಧನೊಂದಿಗೆ ಹೇಗೆ ಮತ್ತು ಏಕೆ ಸೇರಿಕೊಂಡಿತು

ಉತ್ತರ: ಸಾಮ್ರಾಟ್ ಅಶೋಕ ಬುದ್ಧನ ಅನುಯಾಯಿಯಾಗಿ ಬೌದ್ಧ ಧರ್ಮ ಸ್ವೀಕರಿಸಿದ. ಆದರೆ ತಾನು ಮಾತ್ರ ಸ್ವೀಕರಿಸದೆ ಎಲ್ಲರನ್ನೂ ಬಲವಂತವಾಗಿ ಬೌದ್ಧ ಧರ್ಮಕ್ಕೆ ಮತಾಂತರ ಮಾಡಲು ಪ್ರಾರಂಭಿಸಿದ. ಆಗ ಬುದ್ಧಿವಂತರು ಮತ್ತು ಜ್ಞಾನಿಗಳು ಅಶೋಕನಿಗೆ ಶಾಸ್ತ್ರದಲ್ಲಿ ವೇದಗಳಲ್ಲಿ ಬರುವ ಬೌದ್ಧ ಎಂಬ ಶಬ್ದ ತೋರಿಸಿ ಆತನ ಅವತಾರದ ಬಗ್ಗೆ ವೇದ ಶಾಸ್ತ್ರಗಳಲ್ಲಿ ಉಲ್ಲೇಖವಿದೆ. ನಾವು ಕೂಡ ಆತನನ್ನೇ ಆರಾಧಿಸುತ್ತೇವೆ ಎಂದು ದಶಾವತಾರದ ಚಿತ್ರಗಳಲ್ಲಿ ಒಂಬತ್ತನೇ ಅವತಾರ ಬುದ್ಧನದೆಂದು ನಂಬಿಸಿ, ಮತಾಂತರದಿಂದ ಧರ್ಮವನ್ನು ಉಳಿಸಿದರು. ದುರ್ದೈವವೆಂದರೆ ಇಂದಿಗೂ ನಾವು ಅದನ್ನೇ ನಂಬಿಕೊಂಡು ಬಂದಿದ್ದೇವೆ. ಇನ್ನಾದರೂ ಸತ್ಯ ತಿಳಿಯಿರಿ ಹಾಗೂ ನಿಮ್ಮ ಮಕ್ಕಳಿಗೂ ತಿಳಿಸಿ.

(ಯೂಟ್ಯೂಬ್ ಕಥೆ)

# ಅಸೋೀಸಿಯೇೀಷನ್ನಿನಲ್ಲಿ ನಡೆಯುವ ನಾಟಕಗಳ ಕಿರು ನೋೀಟ ಇಲ್ಲಿದೆ

## ಕೊಂಕಣಿ ಹಾಸ್ಯ ಪ್ರಧಾನ ಸಂಗೀತಮಯ ಸಾಮಾಜಿಕ ನಾಟಕ --- "ಲಗ್ನಾ ಪಿಶ್ಶ್ಯೆ"' (Lagna Pissche)

A small yet backward village - very far from progressive world. People of the village carrying on their livelihood from out of the money sent by their children from their work place mainly metro cities. As a result, leaving them at the mercy of traders, money lenders & govt officials. Amongst them money lenders were poweful. They were addressed as ' Savakars ' (ಸಾಹುಕಾರರು). One such Savkar was Timma Prabhu, while his



profession was lending money to the needy by charging hafty interest upon mortgaging their belongings. He was three times widower, a third-degree miser. He was interested in his money; nothing in this world mattered to him more than his wealth. That was perhaps the only reason behind his becoming three times widower. He had yet another qualification that Timma Prabhu was a most unpopular person in the village he lived in.

Timma wishes to get married for the fourth time to a young & pretty girl, hence gets in touch with a 'match maker' " Mashna Bhattu ', a shrewed Poojary, whose altenate source of income is matchmaking. Interestingly, he takes up this marriage alliance proposal, as such seeamingly impossible propositions give him more money. Mashna Bhat lures Savkar with very attractive returns - more for himself than his client. Incidently, he comes in contact with ' Phondu ' Savkar's, not so faithful servant and his young educated son of marriageble age ' Chandrakant ', who is a candidate in the matrimonial market. Both Phondu & Chandrakant are deadly against Timma Prabhu's marriage proposal and wage into hatching a conspiracy to teach a lesson to the old man with the help of Mashna Bhat.

This turns out to be an extremely lucrative predicament for clever Mashna Bhat who exploits the situation to his matrimonial advantage.

The entire episode with its twists & turns ends hilariously with a very happy ending that provides wholesome entertainment and musical extravaganzaa for two hours.

------------------------------------

**ನಾಟಕ: ಹಗ್ಗದ ಕೊನೆ** - ನೇಣುಗಂಬ ಎಂಬುದು ಕೇವಲ ಮರಣ ವಿಧಿಸುವ ಒಂದು ಸಲಕರಣೆ ಮಾತ್ರ ಅಲ್ಲ. ಬದಲಿಗೆ ಅದೊಂದು ಸಂಕೇತ. ಭಯ, ಕ್ರೌರ್ಯ ಮತ್ತು ಮನುಷ್ಯ ಜೀವದ ಬಗೆಗಿನ ಅಗೌರವ ತೋರ್ಪಡಿಸುವುದರ ಸಂಕೇತ . ಪ್ರಾಚೀನ




ಕಾಲದ ಅನಾಗರೀಕತೆ, ಮಧ್ಯಯುಗದ ಧರ್ಮಾಂಧತೆ, ಆಧುನಿಕ ಕಾಲದ ನಿರಂಕುಶತೆ - ಈ ಮೂರನ್ನೂ ಪ್ರತಿನಿಧಿಸುವ ಸಾಮಾನ್ಯ ಅಂಶವದು. ಮನುಕುಲ ಒಟ್ಟಾಗಿ ಏನೆಲ್ಲವನ್ನು ತಿರಸ್ಕರಿಸಬೇಕೋ ಅದೆಲ್ಲದರ ಪರವಾಗಿ ಇದು ನಿಲ್ಲುತ್ತದೆ. ಮನುಷ್ಯನ ಮನಸ್ಸು ಬಲು ಸೂಕ್ಷ್ಮ .ಪ್ರಶಾಂತವಾಗಿದ್ದಲ್ಲಿ ಅದು ಶಾಂತಸಾಗರ; ಪ್ರಕ್ಷುಬ್ಧವಾದರೆ ಅದರಲ್ಲಿ ಚಂಡಮಾರುತವೆದ್ದು ರೌದ್ರನರ್ತನ ತಾಂಡವವಾಡುತ್ತದೆ. ಈ ಪ್ರಕ್ಷುಬ್ಧತೆಗೆ ಕಾರಣ ಹುಡುಕುವುದು ಸುಲಭಸಾಧ್ಯವಲ್ಲ.ಅದಕ್ಕೆ ಸೂಕ್ಷ್ಮತೆ ಬೇಕು. ನಿರ್ಲಿಪ್ತತೆ,ಅನುಕಂಪ ಸಹಾನುಭೂತಿಗಳನ್ನೊಳಗೊಂಡ ತಾಳ್ಮೆಬೇಕು.

ಗಲ್ಲು ಶಿಕ್ಷೆಗೆ ಗುರಿಯಾಗಿ ಕಾಲಗಣನೆ ಮಾಡುತ್ತಿರುವ ಅಪರಾಧಿಗಳ ಅಂತರಂಗದ ಬಯಕೆಯಾದರೂ ಏನು? ತಾನು ಅಮಾಯಕರ ಪ್ರಾಣತೆಗೆಯುತ್ತಿದ್ದರೂ ತನ್ನ ಪ್ರಾಣ ಉಳಿಯಬೇಕೆಂಬ ಹಂಬಲ. ಅದಕ್ಕಾಗಿ ಶತಪ್ರಯತ್ನ,ಮೇಲಿನ ನ್ಯಾಯಾಲಯಗಳಿಗೆ ಮತ್ತೆ ಮತ್ತೆ ಮೇಲ್ಮನವಿ ಸಲ್ಲಿಸುವುದು. ತಾವು ತಪ್ಪಿತಸ್ಥರಲ್ಲವೆಂದು ತೋರ್ಪಡಿಸಿಕೊಂಡರೂ ಮನಸ್ಸಿನ ಆಳದ ಯಾವುದೋ ಮೂಲೆಯಲ್ಲಿ ಪಶ್ಚಾತ್ತಾಪದ ಛಾಯೆಯನ್ನು ಅವರಲ್ಲಿ ಗುರುತಿಸಬಹುದು.

ಹೀಗೆ ಮರಣದಂಡನೆಗೆ ಗುರಿಯಾದ ಖೈದಿಯೊಬ್ಬನ ಕಥನವೇ "ಹಗ್ಗದಕೊನೆ". ಇಲ್ಲಿನ ಖೈದಿ ಗಲ್ಲುಶಿಕ್ಷೆಯ ಸುತ್ತ ಇರುವ ತಪ್ಪು, ಸರಿಗಳನ್ನು ವಿಶ್ಲೇಷಿಸುತ್ತಾನೆ. ಕೊಲೆ, ಶಿಕ್ಷೆ, ಧರ್ಮಯುದ್ಧ ಇವೆಲ್ಲದರ ಮೂಲವೂ ಸಾವೆ ಎಂಬುದನ್ನು

ಸ್ಪಷ್ಟಪಡಿಸುತ್ತಾನೆ. ನಿರಪರಾಧಿಗಳಿಗೆ ಶಿಕ್ಷೆ,ಸತ್ಯಕ್ಕಿಂತ ಸಾಕ್ಷಿಮುಖ್ಯವೇ? ಎಂಬ ಚರ್ಚೆಯನ್ನೂ ಮಾಡುತ್ತಾನೆ. ಪೂರ್ಣನಾಟಕ ಗಲ್ಲುಶಿಕ್ಷೆಯಸುತ್ತ ಸುತ್ತುತ್ತಾ ಕಾನೂನಿನ ಒಳಸುಳಿಗಳನ್ನ ಬಿಚ್ಚುತ್ತಾ ನೋಡುಗನ ಕುತೂಹಲ ಇಮ್ಮಡಿಗೊಳಿಸುತ್ತದೆ.
ರಚನೆ: ಪರ್ವತವಾಣಿ, ವಿನ್ಯಾಸ ,ನಿರ್ದೇಶನ : ಡಾ.ಸಾಸ್ವೇಹಳ್ಳಿ ಸತೀಶ್; ಬೆಳಕು: ಹರಿಗೆ ಗೋಪಾಲಸ್ವಾಮಿ
ಸಂಗೀತ ನಿರ್ವಹಣೆ: ಸನ್ನಿಧಿ ಟಿ ಎನ್; ರಂಗಸಜ್ಜಿಕೆ : ತಮಟೆ ಜಗದೀಶ್, ವರುಣ ಸಿಂಗ್
ಅಭಿನಯಿಸುವವರು: ಹೊಂಗಿರಣ (ರಿ), ಶಿವಮೊಗ್ಗ

--------------------

ನಾಟಕ: '**ಸ್ವಾತಂತ್ರ ಸಮರ ಕರುನಾಡು ಅಮರ**'

ಮಾಲೂರಿನಲ್ಲಿ ಆರಂಭವಾಗಿ ಬೆಂಗಳೂರಿನಲ್ಲಿ ನೆಲೆ ನಿಂತು ಕರ್ನಾಟಕದದಾದ್ಯಂತ ಪಸರಿಸಿ ದೇಶದಲ್ಲೆಡೆ ಹಬ್ಬುತ್ತಿರುವ ತಂಡ 'ರಂಗ ವಿಜಯ'. ನಾಟಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ತನ್ನನ್ನು ತಾನು ಸದಾ ನಿರೂಪಿಸಿಕೊಂಡಿರುವ ಈ ತಂಡ 'ರಂಗಭೂಮಿ ನನ್ನುಸಿರು' ಎಂಬ ಧ್ಯೇಯದೊಂದಿಗೆ ಕಾರ್ಯೋನ್ಮುಖವಾಗಿದೆ.



ಸ್ವಾತಂತ್ರ್ಯ ಸಂಭ್ರಮದ ಅಮೃತ ಮಹೋತ್ಸವದ ಕಾರಣಕ್ಕಾಗಿ ವಿಶೇಷವಾದ ಯೋಜನೆಯೊಂದನ್ನು ರೂಪಿಸಿಕೊಂಡಿತು. ಅದರ ಕಾರಣವಾಗಿ ಜನಿಸಿದ್ದೆ ಈ ನಾಟಕ '**ಸ್ವಾತಂತ್ರ ಸಮರ ಕರುನಾಡು ಅಮರ**' ಕೊರೊನಾದಂತಹ ಕಷ್ಟಕಾಲದಲ್ಲಿ ಎಲ್ಲ ಚಟುವಟಿಕೆಗಳು ನಿಂತು ಹೋಗಿದ್ದರೂ ಈ ತಂಡ ಮಾತ್ರ ತನ್ನ ಚಟುವಟಿಕೆಗಳನ್ನು ನಿಲ್ಲಿಸದೆ ಮೊಬೈಲ್ಗಳ ಮೂಲಕ ಒಬ್ಬರಿಗೊಬ್ಬರು ಸಂಪರ್ಕದಲ್ಲಿದ್ದು ಈ ನಾಟಕವನ್ನು ಸಿದ್ಧಪಡಿಸಲಾಯಿತು

ಈ ನಾಟಕವನ್ನು ಖ್ಯಾತ ಚಿತ್ರ ಕಲಾವಿದರು ಶಿಕ್ಷಕರು ಮತ್ತು ಗಾಯಕರು ಆದಂತ ಡಾ. ಟಿ ಲಕ್ಷ್ಮೀನಾರಾಯಣ ಅವರು ಈ ನಾಟಕವನ್ನು ರಚಿಸಿ ಸಂಗೀತ ನಿರ್ದೇಶನ ಮಾಡಿ ಸ್ವತಃ ತಾವೇ ಹಾಡಿದ್ದಾರೆ. ಹಾಗೆಯೇ ತನ್ನ 7ನೇ ವಯಸ್ಸಿನಲ್ಲಿಯೇ ರಂಗಭೂಮಿಗೆ ಪಾದರ್ಪಣೆ ಮಾಡಿ ಸಿಜಿಕೆ ಅವರ ಗರಡಿಯಲ್ಲಿ ಪಳಗಿದ ಶ್ರೀ ಮಾಲೂರು ವಿಜಿ ಅವರು ಈ ನಾಟಕವನ್ನು ನಿರ್ದೇಶನ ಮಾಡಿದ್ದಾರೆ.

ಈ ನಾಟಕವು ಸುಮಾರು 30ಕ್ಕೂ ಹೆಚ್ಚು ನಟರನ್ನು ಒಳಗೊಂಡಂತ ಪ್ರಯೋಗ ಎಂದು ಹೇಳುವಲ್ಲಿ ತನ್ನ ವಿಶೇಷತೆಯನ್ನು ಸಾರಿಕೊಳ್ಳುತ್ತದೆ. ರಾಣಿ ಅಬ್ಬಕ್ಕನಂತ ವೀರ ರಾಣಿಯ ಯಶೋಗಾಥೆ ಪೋರ್ಚುಗೀಸರ ವಿರುದ್ಧ ಹೋರಾಡಿದಂತ ಕೆಚ್ಚೆದೆಯ ಕಥೆ ಹೇಳುವ ಮೂಲಕ ಈ ನಾಟಕ ಆರಂಭವಾಗುತ್ತದೆ.

ಕರ್ನಾಟಕದಲ್ಲಿ ಮನೆ ಮಾತಾಗಿರುವಂತ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅವರಂಥ ವಿರೋಚಿತ ಸಂದರ್ಭದಲ್ಲಿ ಈ ನಾಟಕದಲ್ಲಿ ಕಟ್ಟಿಕೊಡಲಾಗಿದೆ. ಅಂತೆಯೇ ಸ್ವಾತಂತ್ರ್ಯ ಹೋರಾಟದ ವಿವಿಧ ಹಂತಗಳನ್ನ ನಾವು ನೆನಪಿಸಿಕೊಳ್ಳುವ ಸಂದರ್ಭವಾದ್ದರಿಂದ ಅದಕ್ಕಾಗಿ ಅಂಕೋಲಾದ ಉಪ್ಪಿನ ಸತ್ಯಾಗ್ರಹ, ಶಿವಪುರದ ಧ್ವಜ ಸತ್ಯಾಗ್ರಹ, ಈಸೂರು ದಂಗೆ, ವಿದುರಾಶ್ವತದ ಮಾರಣಹೋಮ ... ಇಂತಹ ಚರಿತ್ರೆ ಪುಟಗಳಲ್ಲಿ ಬರೆಯಬಲ್ಲಂತ ಸಂದರ್ಭಗಳನ್ನ ಈ ನಾಟಕದಲ್ಲಿ ಕಟ್ಟಿಕೊಟ್ಟು ಅದಕ್ಕಾಗಿ ಬಲಿದಾನ ಮಾಡಿದಂತ ಸರ್ವಸ್ವವನ್ನು ಕಳೆದುಕೊಂಡಂತ ಸ್ವಾತಂತ್ರ್ಯ ಯೋಧರ ಸ್ಮರಣೆಯನ್ನ ಮಾಡುವಂತಹ ಪ್ರಯತ್ನದಲ್ಲಿ ಒಂದೊಂದು ದೃಶ್ಯವನ್ನು ಮನದಟ್ಟಾಗುವಂತೆ ಮೂಡಿಸಲಾಗಿದೆ. ಸ್ವಾತಂತ್ರ್ಯಾನಂತರದ ನಾಲ್ಕು ಸಿಂಹಗಳ ತತ್ವಗಳನ್ನು ದೇಶದ ಪ್ರಜೆಗಳಿಗೆ ಅವು ಸಾರಬಹುದಾದ ಸಂದೇಶಗಳನ್ನು ಮನೋಜ್ಞವಾಗಿ ಕಟ್ಟಿಕೊಡಲಾಗಿದೆ. ಈ ನಾಟಕವನ್ನು ನೋಡಿದ ಪ್ರತಿಯೊಬ್ಬ ಪ್ರೇಕ್ಷಕರು ಕಲಾ ಪೋಷಕರು ಮತ್ತೆ ಮತ್ತೆ ನೋಡಬೇಕೆನಿಸುವ ತಂತ್ರಗಾರಿಕೆಯಿಂದ ಈ ನಾಟಕವನ್ನು ರಂಗ ವಿಜಯ ನಿಮ್ಮ ಮುಂದೆ ಸಮರ್ಪಿಸಿಕೊಂಡಿದೆ.

***********

# ಅಗಲಿಕೆ - ನಿರ್ಮಲಾ ಸದಾನಂದ ರಾವ್

ನಮ್ಮ ಆಜೀವ ಸದಸ್ಯರಾಗಿದ್ದ ಶ್ರೀಮತಿ ನಿರ್ಮಲಾ ಸದಾನಂದ ರಾವ್ ಅವರು ಇದೇ ಸೋಮವಾರ, ದಿನಾಂಕ (29-01-2024) ತಮ್ಮ ನಿವಾಸದಲ್ಲಿ ಬೆಳಗಿನ 6.00 ಗಂಟೆಗೆ ನಿಧನರಾದರೆಂದು ಅವರ ಮಗ ಮೇಘನಾದ್ ತಿಳಿಸಿರುತ್ತಾರೆ. ಅವರಿಗೆ 81 ವರ್ಷವಾಗಿತ್ತು. ನಿರ್ಮಲಾ ಅವರು 1996-97 ರಲ್ಲಿ ಅಸೋಸಿಯೇಶನ್ ಸದಸ್ಯರಾದರು. ಅವರ ಮನೆ ದಾದರ್ ನಲ್ಲೇ ಇದ್ದುದರಿಂದ ಪ್ರತಿಯೊಂದು ಕಾರ್ಯಕ್ರಮಕ್ಕೂ ತಪ್ಪದೆ ಬರುತ್ತಿದ್ದರು. ಲೈಬ್ರರಿಯ ಕನ್ನಡ ಪುಸ್ತಕ ಮತ್ತು ಪತ್ರಿಕಗಳನ್ನೂ ಓದುತ್ತಿದ್ದರು.



ಸ್ನೇಹ ಜೀವಿ, ಎಲ್ಲರೊಡನೆ ಮಾತನಾಡುತ್ತ ಕೂರುವುದು ಅವರ ಇಷ್ಟವಾದ ಹವ್ಯಾಸ. ಕಷ್ಟಜೀವಿ, ಹಣಕಾಸಿನ ತೊಂದರೆ ಕಂಡಾಗ ತಮ್ಮ ಅಡುಗೆಯ ಪರಿಣತಿಯ ಉಪಯೋಗ ಪಡೆದು ಉದ್ಯಮ ಮಾಡಿ ಮನೆಯನ್ನು ಮುನ್ನಡೆಸಿದರು. ಅನಾರೋಗ್ಯದಿಂದಾಗಿ ಅವರ ಕೊನೆಯ ದಿನಗಳು ತ್ರಾಸದಾಯಕವಾಗಿದ್ದವು ಆದರೆ ಅವರ ಮಗ ಮನೆಯಲ್ಲೇ ಆಫೀಸ್ ಕೆಲಸ ಮಾಡುತ್ತ ತಾಯಿಯ ಸೇವೆಯನ್ನು ಬಹಳ ಚೆನ್ನಾಗಿ ಮಾಡಿದರು. ಮಗಳು ಆಮ್ರಪಾಲಿ ಕೂಡ ಅವರ ಸೇವೆ ಮಾಡಿದ್ದಾರೆ. ಅಗಲಿದ ಅವರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತ ಅಸೋಸಿಯೇಶನ್ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

# ಮಣ್ಣಿನ ಮಕ್ಕಳ ಪದ ಹಾಡೋರ ತಂಡದ ಅದ್ಭುತ ಗಾಯನ

ಮುಂಬೈನ ಮೈಸೂರ್ ಅಸೋಸಿಯೇಷನ್ ಸಭಾಂಗಣದಲ್ಲಿ ಬೆಂಗಳೂರಿನ ಮಣ್ಣಿನ ಮಕ್ಕಳ ಪದ ಹಾಡೋರ




ತಂಡದವರು, ಕರ್ನಾಟಕ ನಾಟಕ ಅಕಾಡೆಮಿಯ (ಮಾಜಿ) ಅಧ್ಯಕ್ಷ, ರಾಜ್ಯೋತ್ಸವ ಪ್ರಶಸ್ತಿ ವಿಜೇತ, ನಟ, ಕಲಾಭಿಮಾನಿ, ರಂಗತಜ್ಞ, ಅಸಾಧಾರಣ ಸಂಘಟಕ, ನಿರೂಪಕ ಶ್ರೀನಿವಾಸ್ ಜಿ ಕಪ್ಪಣ್ಣ ಅವರ ನೇತೃತ್ವದಲ್ಲಿ ನಮ್ಮನ್ನು ಮೂಲ ಜಾನಪದ ಗೀತೆಗಳಿಗೆ ರಾಗ, ತಾಳ, ಸಾಹಿತ್ಯ ಎಲ್ಲಿಯೂ ಲೋಪ ಬರದಂತೆ ಹಾಡಿ ನಮ್ಮನ್ನು ಆ ಜಾನಪದ ಲೋಕದಲ್ಲಿ ತೇಲಿಸಿದರು. ಈ ತಂಡದ ನಾಯಕತ್ವವನ್ನು ಜಿ.ಅಂಜನಪ್ಪ ಅವರು ವಹಿಸಿದ್ದರು. ತಂಡದಲ್ಲಿ ಜೋಗಿಲ ಸಿದ್ದರಾಜು, ಸಬ್ಬನಹಳ್ಳಿ ರಾಜು, ಶಂಕರ್ ಭಾರತೀಪುರ, ಸರ್ವೋತ್ತಮ್, ಎಚ್. ಎಸ್. ಚಕ್ಕೆರೆ, ಲೋಕೇಶ್, ಮರಿದೇವ್ರು ಮುಂತಾದವರು ಅದ್ಬುತ ಗಾಯನ ನೃತ್ಯದಿಂದ ಗಮನ ಸೆಳೆದರು. ಇವರಿಗೆ ಉತ್ತಮವಾಗಿ ಕೀಬೋರ್ಡ್ ವಾದ್ಯದಲ್ಲಿ ವಿ. ಪುಣ್ಯೇಶ್ ಕುಮಾರ್, ರಿದಂನಲ್ಲಿ ಸುಧೀರ್ ಮತ್ತು ತಬಲಾದಲ್ಲಿ ಉಮಾ ಪ್ರಸಾದ್ ಸಹಕಾರ ನೀಡಿದರು. ಶ್ರೀನಿವಾಸ್ ಜಿ ಕಪ್ಪಣ್ಣ ಅವರು ಕಾರ್ಯಕ್ರಮದ ನಿರೂಪಣೆ ವಹಿಸಿದ್ದರು. ಜಾನಪದ ಕಲೆಯ ಇತಿಹಾಸ, ಅದು ಬೆಳೆದು ಬಂದ ಬಗ್ಗೆ, ಪ್ರತಿಯೊಬ್ಬ ಕಲಾವಿದರ ಪರಿಚಯ, ಅವರು ಜಾನಪದ ಕಲೆಯನ್ನು ಉಳಿಸಿಕೊಳ್ಳಲು ನೀಡುತ್ತಿರುವ ಸಹಕಾರದ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು.

ಅಂದಿನ ಕಾರ್ಯಕ್ರಮದಲ್ಲಿ ದೀಪ ಪ್ರಜ್ವಲನ ಒಂದು ವಿಶಿಷ್ಟವಾದ ಅನುಭವ. ಹಾಡುಗಾರರು ಹಾಡುತ್ತಲೇ ಒಂದೊಂದು ದಿಕ್ಕಿನಿಂದ ಬಂದು ಹಣತೆ ಹಚ್ಚಿ, "ಹಾಡಿರಿ ರಾಗಗಳ, ನುಡಿಸಿರಿ ತಾಳಗಳ, ಹಚ್ಚಿರಿ ದೀಪಗಳ" ಎಂದು ಕೇಳುಗರ ಮೈ ನಿಮಿರೇಳಿಸಿದರು. ಮುಂದೆ ಏಳೆಂಟು ಹಾಡುಗಳು, ತಾಯಿ ಚಾಮುಂಡೇಶ್ವರಿ ಮೈಸೂರಿನಲ್ಲಿ ನೆಲೆಗೊಂಡದ್ದೊಂದು, ಹಳ್ಳಿಗಳು ಎತ್ತಿನ ಬಂಡಿಯಲ್ಲಿ ಸಾಗಬೇಕಾದರೆ ಎತ್ತುಗಳನ್ನು ಹುರಿದುಂಬಿಸಿದ್ದು, ನಂಜುಂಡೇಶ್ವರನನ್ನು ನಂಜನಗೂಡಿಗೆ ಕರೆತರಲು ಮಾರಮ್ಮ ಹೋಗಿದ್ದು "ಕಾಡೆಲ್ಲ ಶ್ರೀಗಂಧ, ಮುದ್ದು ಮಾದೇವ ನೀನು ಇರುವ ಗಿರಿ ಚಂದವೋ- ಉಘೇ ಉಘೇ", ನಂಜನಗೂಡಿನ ಮಹಾದೇವ ಮಲೆ ಮಹದೇಶ್ವರನಾಗಿ ಬೆಟ್ಟದ ಮೇಲೆ ನೆಲೆಗೊಂಡ ಒಂದು ಸುಂದರ ಜಾನಪದ ನಂಬಿಕೆ, "ಯಾಕೆ ಬಡಿದಾಡ್ತಿ



ತಮ್ಮ ಮಾಯಾ ಮೆಚ್ಚಿ ಸಂಸಾರ ನೆಚ್ಚಿ, ನೀ ಹೊಗೋದರಿಯೇ ತಮ್ಮ ಕಣ್ಣ ಮುಚ್ಚಿ ಮಣ್ಣ ಮುಚ್ಚಿ". ಮಣ್ಣು ಹೊನ್ನುಗಳಿಗಾಗಿ ಮನುಷ್ಯ ಭ್ರಮೆಯಲ್ಲಿರುವ ಬಗ್ಗೆ ಒಂದು ಸುಂದರ ಗೀತೆ ಶಿಶುನಾಳ ಶರೀಫರದ್ದು. "ಜೋಗಯ್ಯ ಕಂದ ಮುಕುಂದನಿವನು, ಈ ಸುಂದರನ ಸನ್ಯಾಸಿ ಮಾಡಬಹುದೇ, ಗುರುವೇ ನಿನ್ನಾಟ ಬಲ್ಲವರಾರ್ಯಾರು, ಮುಂತಾಗಿ ಅನೇಕ ಹಾಡುಗಳನ್ನು ಹಾಡಿ ನಮ್ಮನ್ನು ತಮ್ಮ ಸಂಗೀತದಲ್ಲಿ ಮುಳುಗಿಸಿಟ್ಟಿದ್ದರು. ಕೊನೆಯಲ್ಲಿ ನಮ್ಮನ್ನೆಲ್ಲ ಅವರ ಸಂಗೀತಕ್ಕೆ/ ಹಾಡಿಗೆ ಹೆಜ್ಜೆ ಹಾಕಿ ಕುಣಿಯುವಂತೆ ಮಾಡಿದರೆ ಅವರ ಧ್ವನಿಯಲ್ಲಿ, ಅವರ ನಾದದಲ್ಲಿ, ಅವರ ಹಾಡಿನಲ್ಲಿ ಎಂಥ ಮೋಡಿ ಇತ್ತು ಎಂದು ನಮಗೆ ಗೊತ್ತಾಗುತ್ತದೆ.

ಇಂಥ ಒಂದು ಕಾರ್ಯಕ್ರಮವನ್ನು ನಡೆಸಿಕೊಟ್ಟ ಎಲ್ಲಾ ಕಲಾವಿದರಿಗೂ, ಅವರನ್ನು ಹುರಿದುಂಬಿಸಿ ಮುಂಬೈಗೆ ಕರೆತಂದು ಮೈಸೂರು ಅಸೋಸಿಯೇಷನ್ನಿನಲ್ಲಿ ಹಾಡುವಂತೆ ಮಾಡಿದ ನಮ್ಮ ಆತ್ಮೀಯ ಮಿತ್ರರಾದ ಕಪ್ಪಣ್ಣನವರಿಗೂ ಅನಂತಾನಂತ ಧನ್ಯವಾದಗಳು.




## I. QUIZZES & PUZZLES

1. WHAT STAYS HOT IN THE REFRIGERATER ?
2. **TWO** IN A BEDROOM, **ONE** IN A HOUSE BUT **NONE** IN THE KITCHEN ?
3. I FOLLOW YOU ALL TIME AND COPY YOUR EVERY MOVE BUT YOU CAN'T CATCH ME
4. I WIGGLE AND CANNOT SEE SOMETIMES AND SOMETIMES ON THE TREE ?

### II A. Math Puzzle



### II B. Math Puzzle

| | | |
|---|---|---|
| 83 | 24 | 6 |
| 79 | ?? | 9 |
| 68 | 48 | 12 |

### III. QUIZZES & PUZZLES:

**A)** **Can you name three consecutive days without using the words Monday, Tuesday, Wednesday, Thursday, Friday, Saturday, or Sunday?**

**B)** **What 7 letter word is spelled the same way backwards and forwards?**

**C)** **Which of the following words don't belong in the group and why? (CORSET, COSTER, SECTOR, ESCORT, COURTS)**

### IV. Find SYNONYMS WORDS:-

**1.BEAUTIFUL, 2. HAPPY,3. FAST, 4. BIG, 5. SMALL, 6. SMART, 7. BRAVE, 8. DELICIOUS, 9. SAD, 10. ANGRY, 11. FUNNY, 12. COLD, 13. HOT, 14. RICH,15. POOR.**

## PUZZLES & TEASERS ANSWERS

1. **You give a chocolate each to your first 14 friends, and a basket with a chocolate to your 15th friend. Each friend has a chocolate, and one of them has it in a basket.**
2. **He is too short to reach the "9" floor button.**
3. **Hunter takes Goat across (leaving lion and Carrot behind) and returns alone.**
   **Then, hunter takes lion across and returns with Goat.**
   **(Now the hunter, the Carrot and the Goat are on one side and the lion on the other side of the river) After this, farmer takes Carrot across and returns alone.**
   **And finally, farmer takes Goat across.**

**A)<u>Number of Player - Sports/Games:</u> (EXAMPLE: Badminton. 1 or 2), Baseball. 9,Baskketball. 5, Bridge 1 or 2 , Carrom. 1 or 2 , Cricket. 11,Chess. 1, Football. 11, Rugby Football 15,Kabaddi. 7,Hockey. 11,Polo.4,Tennis. 1 or 2, Volleyball. 6, Water Polo. 7.**
**B)<u>Rebus Puzzles:</u> Somewhere Over The Rainbow, Space Invaders, Pretty Please, X Marks the spot, Stand in the Corner, Down Hill, Doble Vision, Upside Down, Pineapple Cake, Back Door, Broken Heart, Half Baked, Unfinished Business.**

<u>Quizzes:</u> A. ***Yen, B. Vatican City, C. 1912, D. Electricity, E. Pharaoh, F. Green, G. Charles. M. Shultz, H. A Millipede, I. Eight, J. Rudolph.***

***Compiled by: Mr Ananth Banwasi***

# 'ಭಾಷೆಗಳು ಸ್ನೇಹ ಸೌಹಾರ್ದತೆಯ ಸಂಕೇತ' – ಆಶಿಶ್ ಶೇಲಾರ್



ಭಾರತದ ಪುರಾತನವಾದ ಭಾಷೆಗಳಲ್ಲಿ ಕನ್ನಡ ಭಾಷೆಯು ಒಂದು. ಈ ಭಾಷೆಯು ಸರಳ, ಸುಲಲಿತ ಹಾಗೂ ಸುಮಧುರವಾಗಿದೆ, ಇಬ್ಬರ ವ್ಯಕ್ತಿಗಳ ನಡುವೆ ಭಾಷೆಯು ಸ್ನೇಹ ಹಾಗೂ ಸೌಹಾರ್ದತೆಯನ್ನು ಮೂಡಿಸಿ ವ್ಯಕ್ತಿಗಳಲ್ಲಿ ಬಾಂಧವ್ಯವನ್ನು ಬೆಳೆಸುವುದಾಗಿದೆ ಎಂದು ಮುಂಬೈನ ಬಿಜೆಪಿ ಘಟಕದ ಅಧ್ಯಕ್ಷರಾದ ಶ್ರೀ ಆಶಿಶ್ ಶೇಲಾರ್‌ವರು ನುಡಿದರು.

ಶ್ರೀ ಆಶಿಶ್ ಶೇಲಾರ್‌ವರು ಅಯೋಧ್ಯೆಯಲ್ಲಿ ಶ್ರೀ ರಾಮ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವದ ಶುಭ ಸಂದರ್ಭದ ಅಂಗವಾಗಿ ದಿನಾಂಕ 22-01-2024ರಂದು ಮಾತುಂಗಾದ ಮೈಸೂರು ಅಸೋಸಿಯೇಷನ್ ಸಭಾಂಗಣದಲ್ಲಿ ಆಯೋಜಿಸಿದ್ದ ಮೈಸೂರು ಅಸೋಸಿಯೇಷನ್ ಹಾಗೂ ಜೀವನ್ ಗಾಣಿ, ಮುಂಬೈ ಇವರ ಸಹಯೋಗದೊಂದಿಗೆ ಶ್ರೀ ರಾಮ ಪೂಜೆ ಮತ್ತು ಕನ್ನಡ ಗೀತ ರಾಮಾಯಣ ಕಾರ್ಯಕ್ರಮದಲ್ಲಿ ಅತಿಥಿ ಸ್ಥಾನ ವಹಿಸಿ ಸಭಿಕರನ್ನು ಉದ್ದೇಶಿಸಿ ನುಡಿದರು. ಇನ್ನೋರ್ವ ಅತಿಥಿ ಶ್ರೀ ನರೇಶ್ ಬಡೋದಿಯಾ (Chief Commissioner of Income Tax) ಅವರು ಮಾತನಾಡುತ್ತಾ 'ನಾನು ಸಂಗೀತದಲ್ಲಿ ಅಭಿರುಚಿಯನ್ನು ಹೊಂದಿದ್ದು ಪಂಡಿತ್ ಉಪೇಂದ್ರ ಭಟ್‌ರವರ ಸಂಗೀತ ಸುಧೆಯನ್ನು ಆಲಿಸಲು ಇಲ್ಲಿಯವರೆಗೆ ಬಂದಿದ್ದು ಅವರು ಹಾಡುವ ಶೈಲಿಗೆ



ಮನಸೋತಿದ್ದೇನೆ ಹಾಗೂ ಮೈಸೂರು ಅಸೋಷಿಯೇಷನ್‌ರವರು ಇಂತಹ ಉತ್ತಮವಾದ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯ. ಇಂತಹ ಕಾರ್ಯಕ್ರಮಗಳು ಇನ್ನಷ್ಟು ಮೂಡಿ ಬರಲಿ ಹಾಗೂ ಈ ಮೈಸೂರು ಅಸೋಸಿಯೇಷನ್ ಸಂಸ್ಥೆಯ ಶತಮಾನೋತ್ಸವವು ಅತ್ಯಂತ ವಿಜ್ರಂಭಣೆಯಿಂದ ಜರುಗಲಿ' ಎಂದು ಹಾರೈಸಿದರು.



ಮೈಸೂರು ಅಸೋಸಿಯೇಷನ್ ಅಧ್ಯಕ್ಷರಾದ ಕೆ. ಕಮಲ ಅವರು ನಡೆದ ಸಭಿಕರನ್ನು ಉದ್ದೇಶಿಸಿ ಮಾತನಾಡುತ್ತಾ 'ನಮ್ಮ ಈ ಅಸೋಸಿಯೇಷನ್ 97 ವರ್ಷ ಪೂರೈಸಿದೆ. ಇದುವರೆಗೆ ನಾವು ಅಸೋಸಿಯೇಷನ್‌ನಲ್ಲಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕಲೆ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದ್ದೇವೆ. ಅಲ್ಲದೆ ಮರಾಠಿ, ಹಿಂದಿ, ಕನ್ನಡ, ತುಳು ಭಾಷಾಭಿಮಾನಿಗಳಿಗೆ




ಇದೊಂದು ಮುಖ್ಯ ವೇದಿಕೆಯಾಗಿದೆ' ಎಂದು ನುಡಿದರು. ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪಾರ್ಥಸಾರಥಿ ನಾಯಕರವರು ಅತಿಥಿಗಳಾದ ಶ್ರೀ. ಬರೋಡಿಯ ಅವರನ್ನು ಮತ್ತು ಮೈಸೂರು ಅಸೋಸಿಯೇಷನ್ ಪದಾಧಿಕಾರಿಗಳು ವೇದಿಕೆ ಮೇಲಿನ ಸಂಗೀತಗಾರರನ್ನು ಸನ್ಮಾನಿಸಿ ಗೌರವಿಸಿದರು. ವೇದಿಕೆ ಮೇಲೆ ಮೈಸೂರು ಅಸೋಸಿಯೇಷನ್ ಅಧ್ಯಕ್ಷರಾದ ಕೆ. ಕಮಲ, ಶ್ರೀ ಶಶಿಕಾಂತ್ ಜೋಶಿ, ಮುಂಬೈನ ಬಿಜೆಪಿ ಘಟಕದ ಅಧ್ಯಕ್ಷರಾದ ಶ್ರೀ ಆಶಿಶ್ ಶೇಲಾರ್, ಶ್ರೀ ಎನ್. ಜಿ. ನವಿಲೇಕರ್ ಇವರುಗಳು ಉಪಸ್ಥಿತರಿದ್ದರು. ಕಮಲಾ ಅವರು ಮುಖ್ಯ ಅತಿಥಿಗಳಾದ ಶ್ರೀ. ಆಶಿಶ್ ಶೇಲಾರ್ ಅವರನ್ನು ಶಾಲು ಹೊದಿಸಿ, ಫಲ–ಪುಷ್ಪಕೊಟ್ಟು ಗೌರವಿಸಿದರು. ಶ್ರೀ. ಆಶಿಶ್ ಶೇಲಾರ್ ಅವರು ಗಾಯಕ ಪಂಡಿತ್ ಉಪೇಂದ್ರ ಭಟ್ ಅವರನ್ನು ಶಾಲು ಹೊದಿಸಿ ಫಲ–ಪುಷ್ಪಕೊಟ್ಟು ಗೌರವಿಸಿದರು.




ಭಾರತರತ್ನ ಪಂಡಿತ್ ಭೀಮ್‌ಸೇನ್ ಜೋಶಿ ಅವರ ಪಟ್ಟ ಶಿಷ್ಯರಾದ ಪಂಡಿತ್ ಉಪೇಂದ್ರ ಭಟ್‌ವರು ಕನ್ನಡದಲ್ಲಿ ಗೀತರಾಮಾಯಣ ಹಾಗೂ ವಚನಗಳನ್ನು ಸುಮಧುರ ಕಂಠದಿಂದ ಸುಶ್ರಾವ್ಯವಾಗಿ ಹಾಡಿ ನೆರೆದಿದ್ದ ಸಭಿಕರಿಗೆ ರಸದೌತಣವನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀ. ಬಿ. ಎಸ್. ಸುರೇಶ್, ಕು. ಭವಾನಿ ಭಾರ್ಗವ, ಶ್ರೀಮತಿ ಪದ್ಮಜಾ ಬನವಾಸಿ, ಶ್ರೀಮತಿ ಸರೋಜಾ ರಾವ್ ಹಾಗೂ ಡಿಗ್ರಿ ಕಾಲೇಜಿನ ಪ್ರಾಚಾರ್ಯರಾದ ಡಾಕ್ಟರ್ ವೀಣಾ ಪ್ರಸಾದ್, ಜೂನಿಯರ್ ಕಾಲೇಜಿನ ಉಪನ್ಯಾಸಕ ವರ್ಗ ಹಾಗೂ ಪ್ರೌಢ ಶಾಲಾ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕ ಶಿಕ್ಷಕೇತರ ವರ್ಗದವರು ಉಪಸ್ಥಿತರಿದ್ದರು ಅಲ್ಲದೆ ಕನ್ನಡ ಮರಾಠಿ ಅಭಿಮಾನಿಗಳು ಉಪಸ್ಥಿತರಿದ್ದು ಸಂಗೀತದ ಕಲಾಸ್ವಾದವನ್ನು ಅನುಭವಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ. ಶೇಖರ್ ಪಾಟ್ಕರ್ ನಿರೂಪಿಸಿದರು. ಎಲ್ಲರೂ ಕೂಡಿಕೊಂಡು ಅದ್ದೂರಿಯಾಗಿ ಕಾರ್ಯಕ್ರಮ ಜರಗಲು ಕಾರಣರಾದರು. ನಂತರ ಮೈಸೂರು ಅಸೋಸಿಯೇಷನ್ ಉಪಾಧ್ಯಕ್ಷರಾದ ಶ್ರೀ ಉಮೇಶ್ ಮಾಸ್ಕೇರಿ ಇವರು ವಂದಿಸಿದರು. ಕೊನೆಯಲ್ಲಿ ಪ್ರೀತಿ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077